ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ಎಸ್‌ಡಿಎಂಸಿಗಳು ಮತ್ತು ಸ್ಥಳೀಯ ಸರಕಾರಗಳು

# ಜಾಗೃತಿ ಅಭಿಯಾನ – 2020-2023







ಸಂಚಿಕೆ: 2

ಖಾಸಗಿ ಪ್ರಸಾರಕ್ಕಾಗಿ ಮಾತ್ರ


# ಸುದ್ದಿ ಪತ್ರ – ಶಿಕ್ಷಣ ಸಂಚಲನ

## ಎಪ್ರಿಲ್ 2021 – ಮಾರ್ಚ್ 2022


**ಪ್ರಕಟಣೆ:**
ದಾಖಲಾತಿ ವಿಭಾಗ,
ಪಡಿ, ಮಂಗಳೂರು

**ಸಲಹೆ ಮತ್ತು ಸಹಕಾರ:**
ರೆನ್ನಿ ಡಿಸೋಜ, ನಿರ್ದೇಶಕರು
ಹಾಗೂ ಪಡಿ ಬಳಗ



**ವಿಳಾಸ:**
ಪಡಿ, ಗಣೇಶ ಬಿಲ್ಡಿಂಗ್,
ಮೊದಲನೆ ಮಹಡಿ,
2ನೇ ಅಡ್ಡರಸ್ತೆ,
ಲೋವರ್ ಬೆಂದೂರ್,
ಮಂಗಳೂರು-575 002

**ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿ:**
www.padivalored.com


## ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ಎಸ್‌ಡಿಎಂಸಿ ಮತ್ತು ಸ್ಥಳೀಯ ಸರಕಾರಗಳು

ಕಳೆದ ಸಂಚಿಕೆಯಲ್ಲಿ – ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ಎಸ್‌ಡಿಎಂಸಿ ಮತ್ತು ಸ್ಥಳೀಯ ಸರಕಾರಗಳು – ಯೋಜನೆಯ ಪರಿಕಲ್ಪನೆ, ಯೋಜನಾ ಅನುಷ್ಠಾನದ ರೀತಿನೀತಿಗಳು, ಯೋಜನೆಯ ಪ್ರದೇಶ ವ್ಯಾಪ್ತಿ, ಯೋಜನೆಯ ಮುಖ್ಯ ಭಾಗವಾಗಿ ಶಾಲಾ ಎಸ್‌ಡಿಎಂಸಿಗಳನ್ನು ಶಾಲಾಮಟ್ಟದಲ್ಲಿ ಬಲಪಡಿಸುವುದು ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನ ಪ್ರಕ್ರಿಯೆಯಲ್ಲಿ ಸ್ಥಳೀಯ ಸರಕಾರಗಳು ತಮ್ಮನ್ನು ತೊಡಗಿಸಿಕೊಳ್ಳಲು ಅಧ್ಯಯನಾತ್ಮಕವಾಗಿ ಕಾರ್ಯಾಚರಿಸಲು ಪೂರಕ ಕಾರ್ಯಯೋಜನೆಗಳನ್ನು ಮಾತ್ರವಲ್ಲದೆ ಆರಂಭಿಕ ಸ್ಥಿತಿಗತಿಗಳು ಮತ್ತು ಅಂಕಿಅಂಶಗಳು ಬದಲಾವಣೆಗಾಗಿ ಅಳವಡಿಸಲಾದ ಮುಖ್ಯ ಅಂಶಗಳು, ಬದಲಾವಣೆಗಾಗಿ ಸಮಸ್ಯೆಗಳಿಗನುಗುಣವಾಗಿ ಪೂರಕ ತರಬೇತಿಗಳು, ತರಬೇತುದಾರರನ್ನು ಅಣಿಗೊಳಿಸುವ ಪ್ರಕ್ರಿಯೆಗಳ ಕುರಿತಾಗಿ ವಿವರಣೆಗಳನ್ನು ಶಿಕ್ಷಣ ಸಂಚಲನ ಸುದ್ದಿಪತ್ರದಲ್ಲಿ ನೀಡಲಾಗಿತ್ತು.




**ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ**

# ಸುಸ್ಥಿರ ಅಭಿವೃದ್ಧಿ ಗುರಿಗಳು - 2030




## ಮಕ್ಕಳೆಡೆಗೆ ಸ್ಥಳೀಯ ಆಡಳಿತಗಳು ಮತ್ತು ಸ್ಥಳೀಯ ಪ್ರಾಧಿಕಾರಗಳಾದ ನಮ್ಮ ಕರ್ತವ್ಯ

**1 NO POVERTY** — **ಬಡತನದಿಂದ ಮುಕ್ತಿ**
ಅಂದರೆ ಎಲ್ಲೆಡೆಯಲ್ಲಿಯೂ ಎಲ್ಲ ವಿಧದ ಬಡತನವನ್ನು ಕೊನೆಗಾಣಿಸುವುದು

**2 ZERO HUNGER** — **ಹಸಿವು ಮುಕ್ತ**
ಅಂದರೆ ಹಸಿವನ್ನು ಕೊನೆಗಾಣಿಸಿ ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಟಿಕತೆಯನ್ನು ಸಾಧಿಸುವುದರೊಂದಿಗೆ ಸುಸ್ಥಿರ ಕೃಷಿಯನ್ನುಉತ್ತೇಜಿಸುವುದು.

**3 GOOD HEALTH** — **ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ**
ಅಂದರೆ ಎಲ್ಲರಿಗೂ ಎಲ್ಲ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸುವುದು.

**4 QUALITY EDUCATION** — **ಗುಣಮಟ್ಟದ ಶಿಕ್ಷಣ**
ಅಂದರೆ ಎಲ್ಲರಿಗೂ ಸಮನ್ವಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸುವುದು.

**5 GENDER EQUALITY** — **ಲಿಂಗ ಸಮಾನತೆ**
ಅಂದರೆ ಲಿಂಗ ಸಮಾನತೆಯನ್ನು ಸಾಧಿಸಿ ಮತ್ತು ಮಹಿಳೆಯರು ಹಾಗು ಹೆಣ್ಣು ಮಕ್ಕಳನ್ನು ಸಶಕ್ತರನ್ನಾಗಿಸುವುದು.

**6 CLEAN WATER AND SANITATION** — **ಸ್ವಚ್ಛ ನೀರು ಮತ್ತು ನೈರ್ಮಲ್ಯ**
ಭೂಮಿಯ ಮೇಲಿರುವ ಎಲ್ಲಾ ಜೀವಿಗಳಿಗೆ ಶುದ್ಧ ಕುಡಿಯುವ ನೀರು

**10 REDUCED INEQUALITIES** — **ಅಸಮಾನತೆಗಳ ಇಳಿಕೆ**
ಮಕ್ಕಳನ್ನು ಅವರ ಜಾತಿ, ಮತ, ಧರ್ಮ, ಭಾಷೆ, ಬುಡಕಟ್ಟು, ಜನಾಂಗ, ಆರ್ಥಿಕ ಪರಿಸ್ಥಿತಿ, ಅಂಗವಿಕಲತೆಯೇ ಮೊದಲಾದ ವಿಚಾರಗಳ ತಾರತಮ್ಯ ಇಲ್ಲದಿರುವುದು.

ನಿರ್ಮಾಣ: ಪಡಿ, ಸರಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ ಯೋಜನೆ 2020-2023, ಲೋವರ್ ಬೆಂದೂರು, ಮಂಗಳೂರು: 575 002, ಸಂಪರ್ಕ ದೂರವಾಣಿ: 0824 2439895

Printed : March 2022

# ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ಎಸ್‌ಡಿಎಂಸಿ ಮತ್ತು ಸ್ಥಳೀಯ ಸರಕಾರಗಳು

ಯೋಜನಾ ಅನುಷ್ಠಾನದ ಮೊದಲ ಸೂಚ್ಯಂಕವಾಗಿ ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ತರಬೇತುಗಳನ್ನು ನೀಡಿ ಸದೃಢಗೊಳಿಸುವುದರ ಮೂಲಕ ಸರಕಾರಿ ಶಾಲೆಗಳಲ್ಲಿನ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸುವುದು.

ಮಾತ್ರವಲ್ಲದೆ ಕೋವಿಡ್ 19 ಸಾಂಕ್ರಾಮಿಕದಿಂದ ಮಕ್ಕಳಿಗೆ ಆಗುತ್ತಿರುವ ತೊಂದರೆಗಳು ಶಾಲಾ ಪುನರಾರಂಭದ ಸಮಯದಲ್ಲಿ ಮಕ್ಕಳ ಶಿಕ್ಷಣ, ಆರೋಗ್ಯ ಪೌಷ್ಟಿಕತೆ, ರಕ್ಷಣೆ ಈ ಮೊದಲಾದ ವಿಚಾರಗಳ ಹಕ್ಕುಗಳಿಂದ ಮಕ್ಕಳು ವಂಚಿತರಾಗದಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಮುಖ್ಯವಾಗಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ವಿಚಾರವಾಗಿ ಚೆಕ್‌ಲಿಸ್ಟ್‌ಗಳನ್ನು ತಯಾರಿಸಿ, ತರಬೇತು ನೀಡಿ ಶಾಲೆಗಳಲ್ಲಿ ಕ್ರಮಬದ್ಧವಾಗಿ ಉಸ್ತುವಾರಿ ನೋಡಿಕೊಳ್ಳುವಲ್ಲಿ ಬಲಪಡಿಸಲಾಗಿದೆ.

ಈಗಾಗಲೇ ತರಬೇತಿ ನೀಡಿ ಸದೃಢಗೊಳಿಸಿದ 24 ಮುಖ್ಯ ತರಬೇತುದಾರರ ಮೂಲಕ ಒಟ್ಟು ಕರ್ನಾಟಕದ 5 ಶೈಕ್ಷಣಿಕ ವಿಭಾಗದ 8 ಜಿಲ್ಲೆಗಳಾದ ಕೊಡಗು, ಬೆಂಗಳೂರು, ಬೆಳಗಾವಿ ಹಾಗೂ ಗುಲ್ಬರ್ಗದ ಆಯ್ದ 8 ಕ್ಲಸ್ಟರ್‌ಗಳಲ್ಲಿನ 61 ಶಾಲೆಗಳಲ್ಲಿನ ಸುಮಾರು 1484 ಎಸ್‌ಡಿಎಂಸಿ ಸದಸ್ಯರಿಗೆ ಮೊದಲ ಹಂತದ ತರಬೇತಿಯನ್ನು ನೀಡಲಾಗಿದೆ. ಈ ತರಬೇತುಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಆಯ್ದ ಮುಖ್ಯ 8 ಅಂಶಗಳನ್ನು ಆಧಾರಿಸಿ 25 ನಿಯತಾಂಕಗಳನ್ನು ರಚಿಸಿ, ನಿಯತಾಂಕಗಳ ಮಹತ್ವ ಮತ್ತು ಅವುಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಗಳನ್ನು ಮಾಡುವ ಕೌಶಲ್ಯಗಳನ್ನು ನೀಡಲಾಯಿತು. ನಂತರ ಮೌಲ್ಯಮಾಪನ ಮಾಡುವುದು, ಪ್ರಗತಿಗಳನ್ನು ಪರಿಶೀಲನೆ ಮಾಡುವುದು ಈ ಬಗ್ಗೆ ವಿವರಣೆಗಳನ್ನು ನೀಡಲಾಗಿದೆ ಮತ್ತು ಇವರನ್ನು ಸಬಲೀಕರಿಸುವಲ್ಲಿ ಮುಂದೆ 3 ತರಬೇತಿಗಳನ್ನು ನೀಡುವ ಕಾರ್ಯತಂತ್ರಗಳನ್ನು ನಡೆಸಲಾಗಿದೆ.

2020–2021ರ ಸೆಪ್ಟೆಂಬರ್ ತಿಂಗಳವರೆಗೆ 3 ಬಾರಿ ಯೋಜನೆಯ ನಿರ್ದಿಷ್ಟ ನಿಯತಾಂಕಗಳನ್ನು ಮುಖ್ಯವಾಗಿರಿಸಿ ಮೌಲ್ಯಮಾಪನವನ್ನು ಪ್ರತೀ 61 ಶಾಲೆಗಳಲ್ಲಿ ನಡೆಸಲಾಗಿದೆ. ಈ ಮೌಲ್ಯಮಾಪನದ ಆಧಾರದಲ್ಲಿ ಪ್ರತೀ ಶಾಲಾಭಿವೃದ್ಧಿ ಸಮಿತಿಗಳು ತಮ್ಮ ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನ ಮಾಡುವಲ್ಲಿ ಸಂಪೂರ್ಣ ಅರಿವನ್ನು ಹೊಂದಿ ಮೇಲುಸ್ತುವಾರಿ ಮಾಡುವ ಪ್ರಕ್ರಿಯೆಗಳಲ್ಲಿ ತೊಡಗಿರುವುದು ಮಾತ್ರವಲ್ಲದೆ ಮೌಲ್ಯಾಂಕಗಳ ಆಧಾರದಲ್ಲಿ ವರ್ಗೀಕರಣ ಮಾಡಿ, ನಿರ್ದಿಷ್ಟ ಶಾಲಾಭಿವೃದ್ಧಿ ಸಮಿತಿಗಳಿಗೆ ತಿಂಗಳ ಪ್ರಗತಿ ಪರಿಶೀಲನೆಯಲ್ಲಿ ತಂಡ ಸದಸ್ಯರ ಮೂಲಕ ಸಲಹೆ ಮಾರ್ಗದರ್ಶನಗಳನ್ನು ನೀಡಲಾಗಿರುತ್ತದೆ.

8 ಜಿಲ್ಲೆಗಳ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣ ಅಧಿಕಾರಿಗಳು, ಸಮೂಹ ಸಂಪನ್ಮೂಲ ವ್ಯಕ್ತಿಗಳು, ಕ್ಷೇತ್ರ ಸಮನ್ವಯ ಅಧಿಕಾರಿಗಳು, ಕ್ಷೇತ್ರ ಸಮೂಹ ಸಂಪನ್ಮೂಲ ವ್ಯಕ್ತಿಗಳು ಆಯಾ ಸಮೂಹ ಸಂಪನ್ಮೂಲ ಕೇಂದ್ರಗಳಡಿ ಆಯ್ದ ಶಾಲೆಗಳ ಮುಖ್ಯ ಶಿಕ್ಷಕರುಗಳು ಎಸ್‌ಡಿಎಂಸಿ ಅಧ್ಯಕ್ಷರುಗಳು ಸೇರಿ ಜಿಲ್ಲಾ ಮಟ್ಟದಲ್ಲಿ ಶಾಲಾಭಿವೃದ್ಧಿ ಮತ್ತು ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಕಂಡುಕೊಂಡ ಮುಖ್ಯ ಅಭಿವೃದ್ಧಿ ವಿಚಾರಗಳು ಮತ್ತು ಸವಾಲುಗಳ ಕುರಿತಾಗಿ ಚರ್ಚೆಗಳನ್ನು ನಡೆಸಲಾಗಿದೆ. ಈ ಸಮಾಲೋಚನೆಯಲ್ಲಿ ಮುಖ್ಯವಾಗಿ ಪ್ರಸ್ತುತ ಕೋವಿಡ್ 19ರ ಈ ಸಂಧರ್ಭದಲ್ಲಿ ಶಾಲೆಯಲ್ಲಿ ಮಕ್ಕಳ ಶಿಕ್ಷಣ ರಕ್ಷಣೆ ಮತ್ತು ಆರೋಗ್ಯದ ಕುರಿತಾಗಿ ಮಹತ್ತರ ಚರ್ಚೆಗಳು ನಡೆದವು. ಈಗಾಗಲೇ ಯೋಜನೆ ತಯಾರಿಸಿರುವ "ಕೋವಿಡ್ ಮುಕ್ತ ಶಾಲೆ ಚೆಕ್‌ಲಿಸ್ಟ್"ನ್ನು ಎಲ್ಲರ ಗಮನಕ್ಕೆ ತರಲಾಗಿದ್ದು ಈ ಕುರಿತಾಗಿ ಪ್ರತೀ ಎಸ್‌ಡಿಎಂಸಿಗಳಿಗೆ ಸಂಪೂರ್ಣ ಮಾಹಿತಿಯನ್ನು 2ನೇ ಹಂತದ ತರಬೇತಿಯಲ್ಲಿ ನೀಡಬೇಕಾಗಿ ನಿರ್ಧರಿಸಲಾಗಿದೆ.

2ನೇ ಹಂತದ ತರಬೇತಿ ನಮೂನೆಯನ್ನು ಈಗಾಗಲೇ ತಯಾರಿಸಲಾಗಿದ್ದು, ತಂಡ ಸದಸ್ಯರು ಮತ್ತು ಯೋಜನೆಯು ಆಯ್ದುಕೊಂಡ 24 ಮುಖ್ಯ ತರಬೇತುದಾರರಿಗೆ ತರಬೇತುಗಳನ್ನು ನೀಡಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರುಗಳಿಗೆ ತರಬೇತಿ ನೀಡಿ, ಅವರು ತಯಾರಿಸಲಿರುವ ಕ್ರಿಯಾ ಯೋಜನೆಗಳ ಅನುಷ್ಠಾನಗಳಿಗೆ ಮಾರ್ಗದರ್ಶನ ನೀಡುವಂತೆ ಮಕ್ಕಳ ಹಕ್ಕುಗಳು, ಅವುಗಳ ರಕ್ಷಣೆ ಮಾತ್ರವಲ್ಲದೆ ಶಿಕ್ಷಣ ಹಕ್ಕು ಕಾಯಿದೆಗಳ ವಿವರಣೆಗಳು ಮತ್ತು ಅವುಗಳ ಮಹತ್ವದ ಕುರಿತಾಗಿ ಮಾಹಿತಿಗಳನ್ನು ನೀಡಲಾಗಿದೆ. ಅದರಲ್ಲೂ ಈಗಾಗಲೆ ಇಲಾಖೆಗಳೊಂದಿಗೆ ಸೇರಿ ನಿರ್ಧರಿಸಿದಂತೆ "ಕೋವಿಡ್ ಮುಕ್ತ ಶಾಲೆ ಚೆಕ್‌ಲಿಸ್ಟ್"ಗಳನ್ನು ಸವಿವರವಾಗಿ ವಿವರಿಸುತ್ತಾ ಇವು ಸರಿಯಾದ ರೀತಿಯಲ್ಲಿ ನಿರ್ವಹಿಸುವಂತೆ ಮತ್ತು ಮೇಲ್ವಿಚಾರಣೆ ನಡೆಸುವಲ್ಲಿ ಎಸ್‌ಡಿಎಂಸಿಯವರ ಪಾತ್ರಗಳ ಕುರಿತಾಗಿ ತರಬೇತಿಯನ್ನು ನೀಡಲಾಗಿದೆ.

ಮುಖ್ಯವಾಗಿ 4 ಹಂತಗಳ ತರಬೇತಿ ನಮೂನೆಗಳ ತಯಾರಿಯನ್ನು ಮಾಡಲಾಗಿದ್ದು, ರಾಜ್ಯದ ಆಯ್ದ 61 ಸರಕಾರಿ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ನೀಡಿದ ಅನುಭವ ಮತ್ತು ಪರಿಣಾಮಗಳನ್ನು ಗಮನಿಸಿ, ಮುಂದೆ ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲೂ ಶಿಕ್ಷಣ ಹಕ್ಕು ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಿಸುವಲ್ಲಿ ಸಹಾಯವಾಗುವಂತೆ ಮಾರ್ಗದರ್ಶಿ ಕೈಪಿಡಿಯೊಂದನ್ನು ತಯಾರಿಸುವ ಪ್ರಕ್ರಿಯೆಯನ್ನು ನಡೆಸಲಾಗಿದೆ. ಈ ಪ್ರಕ್ರಿಯೆಯು ಶಿಕ್ಷಣ ಇಲಾಖೆ, ಮತ್ತು ಮಕ್ಕಳ ರಕ್ಷಣೆಗಾಗಿರುವ ಮುಖ್ಯ ಪ್ರಾಧಿಕಾರವಾಗಿರುವ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಇಲ್ಲಿನ ಆಡಳಿತಾಧಿಕಾರಿಗಳೊಂದಿಗೆ ಸಂವಹನಗಳನ್ನು, ಸಮಾಲೋಚನೆಗಳನ್ನು ನಡೆಸಲಾಗಿದೆ.

ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದಲ್ಲಿ ಸ್ಥಳೀಯ ಸರಕಾರಗಳ ಪಾತ್ರ ಕುರಿತಾಗಿ ಯೋಜನೆ ಹಾಕಿಕೊಂಡ ಕಾರ್ಯಕ್ರಮಗಳಲ್ಲಿ ಮುಖ್ಯವಾಗಿ ಪಂಚಾಯತ್ ರಾಜ್ ನಿಯಮ ಹಾಗೂ ಶಿಕ್ಷಣ ಹಕ್ಕು ಕಾಯಿದೆ, ಸರಕಾರದ ಸುತ್ತೋಲೆಗಳನ್ನು ಆಧರಿಸಿ ಸ್ಥಳೀಯಾಡಳಿತವು ಶಿಕ್ಷಣದ ಕಡೆಗೆ ಕಳೆದ ವರ್ಷದ

ಕಾರ್ಯಾನುಷ್ಠಾನದ ಅನುಪಾಲನೆಯನ್ನು ಮಾಡುತ್ತಾ 2ನೇ ಹಂತದ ತರಬೇತಿ ಕೈಪಿಡಿಯನ್ನು ನುರಿತ ಸಲಹೆಗಾರರೊಂದಿಗೆ ಚರ್ಚಿಸಿ, ತಯಾರಿಸಲಾಗಿದೆ. ಯೋಜನೆಯಲ್ಲಿ ಈಗಾಗಲೇ ತರಬೇತುಗೊಂಡ 24 ಸಂಪನ್ಮೂಲ ವ್ಯಕ್ತಿಗಳಿಗೂ ತಂಡ ಸದಸ್ಯರಿಗೂ 2ನೇ ಹಂತದ ತರಬೇತಿಯನ್ನು ನೀಡಲಾಗಿದೆ.

ಉಭಯಜಿಲ್ಲೆಗಳ 24 ಸ್ಥಳೀಯ ಸರಕಾರಗಳ ಒಟ್ಟು 474 ಸದಸ್ಯರಿಗೆ 2ನೇ ಹಂತದ ತರಬೇತು ನೀಡಲಾಗಿದೆ. ತರಬೇತಿ ಸಮಯದಲ್ಲಿ ಸ್ಥಳೀಯ ಸರಕಾರಗಳು ರಚಿಸಿರುವ ಕ್ರಿಯಾ ಯೋಜನೆಗಳ ಅನುಷ್ಠಾನದ ಅನುಪಾಲನೆ ಮತ್ತು ಅಗತ್ಯ ಮಾರ್ಗದರ್ಶನಗಳನ್ನು ನೀಡುವಲ್ಲಿ ಪೂರಕ ಮಾಹಿತಿಯಾಗಿ ಸರಕಾರದ ಕಾಯಿದೆಗಳು, ನಿಯಮಗಳ ಕುರಿತಾಗಿ ವಿವರವಾಗಿ ಸಂಪನ್ಮೂಲ ವ್ಯಕ್ತಿಗಳಿಗೆ ತಿಳಿಸಲಾಗಿದೆ,

ಯೋಜನೆಯ ಪರಿಕಲ್ಪನೆಯನ್ನು ಅನುಷ್ಠಾನಿಸಲು ವಿಷಯಾಧಾರಿತವಾಗಿ ಸ್ಥಳೀಯ ಸರಕಾರಗಳ ಬಲವರ್ಧನೆ ಮತ್ತು ಎಸ್‌ಡಿಎಂಸಿ ಬಲವರ್ಧನೆಗಾಗಿ ದೃಷ್ಟಿ ಹಾಗೂ ಮಾರ್ಗದರ್ಶಿ ತರಬೇತಿ ಕೈಪಿಡಿಗಳ ಮೂಲಕ ಅಂದರೆ ಪ್ರತೀ ಗುಂಪುಗಳಿಗೆ 4 ಹಂತಗಳಲ್ಲಿ ಕ್ರಮಬದ್ಧವಾಗಿ ಸಂಪನ್ಮೂಲ ವ್ಯಕ್ತಿಗಳನ್ನು ತಯಾರುಗೊಳಿಸಲಾಗುತ್ತಿದೆ. ತರಬೇತಿಗೊಂಡು ಯೋಜನೆಯಲ್ಲಿ ತೊಡಗಿಸಿಕೊಂಡು ಆಸಕ್ತರಾಗಿ ಯೋಜಿತ ಗುಂಪುಗಳಿಗೆ ತರಬೇತಿಯನ್ನು ನಿಗದಿತ ಸಮಯದಲ್ಲಿ ಯೋಜನಾ ಸಿಬ್ಬಂದಿಗಳೊಡನೆ ನೀಡಿ ಪ್ರಗತಿಗಳ ಅನುಪಾಲನೆ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು.

1. ಕಾಂತಿ ಬಿ.ಎಸ್. ಸುಳ್ಯ/ಸಂಪಾಜೆ
2. ನಾರಾಯಣ ಕಿಲಂಗೋಡಿ, ಸುಳ್ಯ/ಸಂಪಾಜೆ
3. ಕೃಷ್ಣವೇಣಿ, ಸಂಪಾಜೆ
4. ಯಶೋಧ, ರಾಮನಗರ, ಬೆಂಗಳೂರು
5. ಸುಕನ್ಯ ಜಿ.ಎಸ್, ರಾಮನಗರ, ಬೆಂಗಳೂರು
6. ಶ್ರೀನಿವಾಸು ಎಂ, ರಾಮನಗರ
7. ರವಿಕುಮಾರ ಎಂ, ದಾವಣಗೆರೆ
8. ಶಕುಂತಲ, ದಾವಣಗೆರೆ,
9. ಜಿ.ಸಿ. ಮಂಗಳ, ದಾವಣಗೆರೆ
10. ಭಾಗ್ಯಮ್ಮ, ಬೆಂಗಳೂರು
11. ರಾಣಿ ಚಂದ್ರಶೇಖರ್. ಮೈಸೂರು
12. ಶೋಭಾ ಮೈಸೂರು
13. ವೀಣಾ ಮೈಸೂರು
14. ಆಂತೊನಿಯಪ್ಪ ಹುಲಿಗೆಪ್ಪ, ಬೆಳಗಾವಿ
15. ಗೀತಾ ಚೆನಾಗೌಡ, ಪಾಟೀಲ್, ಬೆಳಗಾವಿ
16. ರಮೇಶ್ ನಾಗಾಗೊಲ್, ಬಾಗಲಕೋಟೆ
17. ರೇವಣ್ಣ ಸಿದ್ದಯ್ಯ, ಬಾಗಲಕೋಟೆ
18. ಶೋಭ ಎಂ ಕಿಣಗಿ, ಬೆಳಗಾವಿ
19. ದೇವಪ್ಪ, ಕೊಪ್ಪಳ
20. ಬಸವರಾಜು ಗವಿಸಿದ್ದಪ್ಪ
21. ಶೀಲಾ ಹಾಳ್ಕುರಿಕೆ, ಕೊಪ್ಪಳ
22. ಶಿವಲೀಲಾ, ಕೊಪ್ಪಳ
23. ಮಲ್ಲಯ್ಯ, ಕೊಪ್ಪಳ
24. ಮರಿಯಪ್ಪ ಕೊಪ್ಪಳ

25. ಪ್ರಮೀಳಾ, ಉಡುಪಿ
26. ದಿವಾಕರ್, ಉಡುಪಿ
27. ಬಾಲಕೃಷ್ಣ ಪೂಜಾರಿ, ಉಡುಪಿ
28. ವಾಸು, ಉಡುಪಿ
29. ಶೋಭಾ ಭಾಸ್ಕರ್, ಉಡುಪಿ
30. ಜಯವಂತ ರಾವ್, ಉಡುಪಿ
31. ಪ್ರಕಾಶ ಉಡುಪಿ
32. ಸುಲೋಚನಾ, ಉಡುಪಿ
33. ಮೋಹನ್‌ಚಂದ್ರ ಕಳಾವರ
34. ರೇಶ್ಮ, ಕಾರ್ಕಳ
35. ಎಸ್.ವಿ. ನಾಗರಾಜ್, ಕುಂದಾಪುರ
36. ಮಂಜು ವಿಟ್ಲ, ಬಂಟ್ವಾಳ
37. ನಂದಾ ಪಾಯಸ್, ಮಂಗಳೂರು
38. ಆಶಲತಾ ಸುವರ್ಣ
39. ಪುಷ್ಪಲತಾ, ಬೆಳ್ತಂಗಡಿ
40. ವಿನುತ ಬೆಳ್ತಂಗಡಿ
41. ಆರ್. ಮಲ್ಲಿಕಾ
42. ಕಮಲ ಗೌಡ
43. ವತ್ಸಲಾ ನಾಯಕ್
44. ಜನಾರ್ಧನ ಪೆರಾಜೆ
45. ಹರಿಣಾಕ್ಷಿ ಶೆಟ್ಟಿ
46. ರಾಜೇಶ್ವರಿ ಎಂ ಕಾಡುತೋಟ
47. ದುರ್ಗಾಪ್ರಸಾದ್
48. ಸುದಾಮಣಿ



ಕೋವಿಡ್–19 ಸಾಂಕ್ರಾಮಿಕ ಪಿಡುಗು ಎಲ್ಲರನ್ನು ಬಾಧಿಸಿದೆ. ಅದರಲ್ಲೂ ವಿಶೇಷವಾಗಿ ಮಕ್ಕಳು ಎಲ್ಲಾ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಕೋವಿಡ್ ನಿಂದಾಗಿ ಮಕ್ಕಳ ಶಿಕ್ಷಣ, ಕೌಶಲ್ಯ, ಮಾನಸಿಕ ಮತ್ತು ದೈಹಿಕ ಆರೋಗ್ಯ ಹೀಗೆ ಎಲ್ಲಾ ಅಂಶಗಳು ದೀರ್ಘಕಾಲ ಮಕ್ಕಳನ್ನು ಕಾಡಲಿದೆ ಎನ್ನುತ್ತಾರೆ ತಜ್ಞರು. ಕೋವಿಡ್ ಪಿಡುಗಿನಿಂದ ಗಂಭೀರ ಸಾಮಾಜಿಕ ಬಿಕ್ಕಟ್ಟು ಸೃಷ್ಟಿಯಾಗಿದ್ದು, ಮಕ್ಕಳು ಬಾಲಕಾರ್ಮಿಕತೆ, ಬಾಲ್ಯವಿವಾಹ, ಅಪೌಷ್ಠಿಕತೆ, ದೈಹಿಕ ಮತ್ತು ಮಾನಸಿಕ ದೌರ್ಜನ್ಯ, ಶಾಲೆಯಿಂದ ಹೊರಗುಳಿದಿರುವುದು, ಬಿಕ್ಷಾಟನೆ ಇಂತಹ ಅನೇಕ ಸಮಸ್ಸೆಗಳಿಗೆ ಮಕ್ಕಳು ಒಳಗಾಗುತ್ತಿದ್ದಾರೆ. ಬದುಕುವ, ರಕ್ಷಣೆ, ಅವಕಾಶ ಹಾಗೂ ವಿಕಾಸದ ಮತ್ತು ಭಾಗವಹಿಸುವ ಹಕ್ಕುಗಳಿಂದ ಮಕ್ಕಳು ವಂಚಿತರಾಗುತ್ತಿದ್ದಾರೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮಕ್ಕಳ ಹಕ್ಕುಗಳನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ತಳಹಂತದಿಂದಲೇ ಮಕ್ಕಳ ಹಕ್ಕುಗಳ ವ್ಯಾಪಕ ಪ್ರಚಾರವಾಗಬೇಕೆಂಬ ಆಶಯದೊಂದಿಗೆ ಜಿಲ್ಲೆಯ ವಿವಿಧ ಸಂಘಟನೆಗಳ ಸಹಭಾಗಿತ್ವದೊಂದಿಗೆ ಮುಖ್ಯವಾಗಿ ಶಿಕ್ಷಣ ಇಲಾಖೆ, ಸಂಚಲನ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಧರ್ಮಜ್ಯೋತಿ ಸಂಸ್ಥೆ, ಇಂಚರ ಫೌಂಡೇಶನ್, ಪೋಲಿಸ್ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಗ್ರಾಮ ಪಂಚಾಯತ್‌ಗಳು, ಸಂಪನ್ಮೂಲ ಕೇಂದ್ರಗಳ ದಕ್ಷಿಣ ಕನ್ನಡ ಜಿಲ್ಲೆಯ 5 ತಾಲೂಕುಗಳ ಘಟಕಗಳು, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ, ದ.ಕ. ಜಿಲ್ಲೆ ಸೇರಿ ಮಕ್ಕಳ ಹಕ್ಕುಗಳು ಮತ್ತು ರಕ್ಷಣೆಗಾಗಿ 2021ರ ನವೆಂಬರ್ 11ರಿಂದ ಆರಂಭಗೊಂಡು ಜನವರಿ 03 2022ರವರೆಗೆ ಜಿಲ್ಲೆಯ ವಿವಿದೆಡೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮಕ್ಕಳ ಮಾಸೋತ್ಸವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು ಬಹುಪ್ರಾಮುಖ್ಯವಾದ 21 ಅಂಶಗಳನ್ನು ಸರ್ವಸಂಘಟನೆಗಳ ಒಕ್ಕೊರಲಿನ ಶಿಫಾರಸ್ಸುಗಳನ್ನು ಮಾಡಿ ಅನುಷ್ಠಾನಕ್ಕಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹಾಗೂ ಕರ್ನಾಟಕದ ಮುಖ್ಯಮಂತ್ರಿಯವರಿಗೆ ಸಲ್ಲಿಸಲಾಗಿದೆ.

ಜನಸಂಘಟನೆಗಳ ಮೂಲಕ ಮಕ್ಕಳ ಶಿಕ್ಷಣ ಹಕ್ಕು, ರಕ್ಷಣೆ, ಆರೋಗ್ಯ ಹಾಗೂ ಪೋಷಣೆಯ ಕುರಿತಾಗಿ ಸರಕಾರವು ಗಮನ ಹರಿಸಬೇಕಾದ ಪ್ರಮುಖ ಅಂಶಗಳನ್ನು ಕೆಳಕಂಡಂತೆ

1. ಶೈಕ್ಷಣಿಕ ಸಂಸ್ಥೆಗಳಲ್ಲಿ ಕರ್ನಾಟಕ ಮಕ್ಕಳ ರಕ್ಷಣಾ ನೀತಿಯು 2016ರಲ್ಲಿ ಜಾರಿಗೆ ಬಂದಿದ್ದರೂ 90%ಕ್ಕಿಂತಲೂ ಹೆಚ್ಚಿನ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಅಳವಡಿಸಿಲ್ಲವಾದುದರಿಂದ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಜಾರಿ ಮಾಡಲು ಶೈಕ್ಷಣಿಕ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ ಎಲ್ಲಾ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

2. ಪೋಷಣೆಯ ಅಗತ್ಯತೆ ಇರುವ ಮಕ್ಕಳಿಗೆ ಶಿಕ್ಷಣ, ಆರೈಕೆ ಮತ್ತು ಇನ್ನಿತರ ಸೌಲಭ್ಯಗಳನ್ನು ನೀಡಲು ಎಲ್ಲಾ ಜಿಲ್ಲೆಗಳಲ್ಲಿ ಬಾಲಕಿಯರ ಬಾಲಮಂದಿರದ ವ್ಯವಸ್ಥೆಯನ್ನು ಕೂಡಲೇ ಕಾರ್ಯರೂಪಕ್ಕೆ ತರಲು ಕ್ರಮಕೈಗೊಳ್ಳುವುದು.

3. (ಅ) ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು ನಡೆಯುವಂತೆ, ಪಟ್ಟಣ/ನಗರ ಪ್ರದೇಶದ ಮಕ್ಕಳಿಗೂ ತಮ್ಮ ಭಾಗವಹಿಸುವಿಕೆಯ ಹಕ್ಕನ್ನು ಖಾತರಿಗೊಳಿಸಲು ಜಿಲ್ಲೆಯ ಪಟ್ಟಣ/ನಗರಾಡಳಿತ ವ್ಯವಸ್ಥೆಯಲ್ಲಿ ಜಾರಿಗೆ ತರಲು ಕ್ರಮ ತೆಗೆದುಕೊಳ್ಳುವುದು. ಹಾಗೂ ಸರಕಾರದ ಸುತ್ತೋಲೆಯ ಅನುಸಾರ ನಡೆಸಲು ಸುತ್ತೋಲೆ ಹೊರಡಿಸುವಂತೆ ಕ್ರಮಕೈಗೊಳ್ಳುವಂತೆ ಪ್ರತೀ ಜಿಲ್ಲಾಡಳಿತವೂ ಖಾತರಿಗೊಳಿಸುವುದು.

(ಆ) ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳ ವಿಶೇಷ ಗ್ರಾಮಸಭೆಯನ್ನು ಸರಕಾರದ ಸುತ್ತೋಲೆಯ ಪ್ರಕಾರ ನಡೆಸುತ್ತಿದೆಯೇ ಎಂಬುದನ್ನು ಜಿಲ್ಲಾಡಳಿತ ಖಾತರಿಗೊಳಿಸಬೇಕು.

4. (ಅ) ಪ್ರತೀ ಜಿಲ್ಲೆಗಳಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಈ ಬಗ್ಗೆ ಮಕ್ಕಳಿಗೆ ಶಾಲೆಗಳಲ್ಲಿ, ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಮತ್ತು ಸಾರ್ವಜನಿಕರಿಗೆ ಪೋಕ್ಸೋ ಕಾಯಿದೆ ಬಗ್ಗೆ ಮತ್ತು ಮಕ್ಕಳು ತಮ್ಮ ಸ್ವರಕ್ಷಣೆಯನ್ನು ಮಾಡಿಕೊಳ್ಳುವ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು.

(ಆ) ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಕೇಸು ದಾಖಲಿಸಲು ಪೊಲೀಸ್ ಸಹಾಯಕ್ಕೆ ಬರುವಾಗ ಸರಿಯಾದ ಮಾರ್ಗದರ್ಶನವನ್ನು ಮಕ್ಕಳು ಮತ್ತು ಪೋಷಕರಿಗೆ ನೀಡುವುದು ಅತೀ ಅಗತ್ಯವಾಗಿದ್ದು ಈ ಬಗ್ಗೆ ಪೋಲಿಸ್ ಇಲಾಖೆಗಳು ಮಗುಸ್ನೇಹಿಯಾಗಿ ಕಾರ್ಯಪ್ರವೃತ್ತರಾಗಲು ಕ್ರಮ ಕೈಗೊಳ್ಳುವುದು.

5. ಬಾಲ ನ್ಯಾಯ ಕಾಯಿದೆಯ ಆಶಯದಂತೆ ಮಗುಸ್ನೇಹಿ ಪೋಲೀಸ್ ವ್ಯವಸ್ಥೆಯನ್ನು ಖಾತರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

6. ಬಾಲ್ಯ ವಿವಾಹ ತಡೆಗಟ್ಟುವ ಮತ್ತು ಕಾಯಿದೆ ಅನುಷ್ಠಾನದ ಬಗ್ಗೆ ವ್ಯಾಪಕವಾಗಿ ಪಂಚಾಯತ್ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳುವುದು.

7. ಉದ್ಯೋಗಕ್ಕಾಗಿ ಬೇರೆಬೇರೆ ಜಿಲ್ಲೆಗಳಿಂದ ವಲಸೆ ಕುಟುಂಬಗಳು ತಾತ್ಕಾಲಿಕವಾಗಿ ನೆಲೆನಿಂತು ಜೀವನ ನಿರ್ವಹಿಸುತ್ತಿದ್ದಾರೆ. ಬೇರೆ ರಾಜ್ಯಗಳಿಂದ ಜೀವನ ನಿರ್ವಹಣೆಯ ನೆಪದಲ್ಲಿ ಭಿಕ್ಷಾಟನೆಗಾಗಿ ಬರುವ ಕುಟುಂಬಗಳ ಮಕ್ಕಳು ಭಿಕ್ಷಾಟನೆಯಲ್ಲಿ ನಿರತವಾಗಿದ್ದು ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುತ್ತಿದೆ. ಆದ್ದರಿಂದ ಜಿಲ್ಲೆಗಳನ್ನು ಭಿಕ್ಷಾಟನಾ ಮುಕ್ತ ಜಿಲ್ಲೆಯನ್ನಾಗಿಸಲು ಕ್ರಮ ಕೈಗೊಳ್ಳುವುದು.

8. ಮಕ್ಕಳು ಮಾದಕ ವಸ್ತುಗಳ ಮಾರಾಟಕ್ಕೆ ಬಲಿಯಾಗುತ್ತಿರುವುದು ಹೆಚ್ಚಾಗುತ್ತಿದ್ದು, ಅದನ್ನೇ ಚಟವನ್ನಾಗಿಸಿಕೊಂಡ ಮಕ್ಕಳನ್ನು ವ್ಯಸನದಿಂದ ಮುಕ್ತಗೊಳಿಸಲು ಆಪ್ತ ಸಮಾಲೋಚಕರ ತೀವ್ರ ಕೊರತೆ ಮತ್ತು ಸೂಕ್ತ ವೈದ್ಯಕೀಯ ಸೇವೆಯ ಕೊರತೆ ಇದೆ. ಈ ಬಗ್ಗೆ ಸೂಕ್ತ ಕ್ರಮ ಹಾಗೂ ಮಕ್ಕಳಿಗೆ ಈ ಮಾದಕ ವಸ್ತುಗಳು ಲಭಿಸದಂತೆ ಕ್ರಮ ಕೈಗೊಳ್ಳುವುದು.

9. (ಅ) ಬಾಲಕಾರ್ಮಿಕ ಮುಕ್ತ ಜಿಲ್ಲೆ ಘೋಷಿಸುವ ಪ್ರಕ್ರಿಯೆಯಲ್ಲಿ ಸ್ಥಳೀಯ ಆಡಳಿತ ಮಟ್ಟದಲ್ಲಿ ಘೋಷಣೆ ಮಾಡಿ ತಾಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಘೋಷಣೆ ಮಾಡುವ ಪ್ರಕ್ರಿಯೆ ನಡೆಯಬೇಕು.

(ಆ) ಉದ್ಯೋಗದ ನಿಮಿತ್ತ ವಲಸೆ ಕುಟುಂಬಗಳು ಹೆಚ್ಚಾಗುತ್ತಿದ್ದು, ಈ ಕುಟುಂಬಗಳು ತಾತ್ಕಾಲಿಕವಾಗಿ ನೆಲೆ ನಿಂತು ಊರು ಬಿಡುತ್ತಿದ್ದಾರೆ, ಅಲ್ಲದೆ ಬೇರೆ ರಾಜ್ಯಗಳಿಂದ ಜೀವನ ನಿರ್ವಹಣೆಯ ನೆಪದಲ್ಲಿ ಬಿಕ್ಷಾಟನೆಗಾಗಿಯೇ ಬರುವ ಕುಟುಂಬಗಳ ಮಕ್ಕಳ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ ಹಾಗೂ ರಕ್ಷಣೆಯನ್ನು ಖಾತರಿಪಡಿಸುವುದಕ್ಕಾಗಿ ಡೇಕೇರ್ ಸೆಂಟರ್‌ಗಳನ್ನು ಜಿಲ್ಲೆಯಲ್ಲಿ ತೆರೆಯಬೇಕು.

10. ಸೈಬರ್ ಕ್ರೈಂನಂತಹ ಅಪಾಯಕಾರಿ ಚಟುವಟಿಕೆಗಳಿಗೆ ಮಕ್ಕಳು ಒಳಗಾಗುತ್ತಿದ್ದು, ಈ ಬಗ್ಗೆ ಮಕ್ಕಳು ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪೋಲೀಸ್ ಇಲಾಖೆಯ ಹಾಗೂ ಇತರೇ ಇಲಾಖೆಗಳ ಮುಖಾಂತರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಕ್ರಮ ತೆಗೆದುಕೊಳ್ಳುವುದು.

11. ಶಿಕ್ಷಣ ಹಕ್ಕು ಕಾಯಿದೆಯನ್ವಯ 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳು ಕಡ್ಡಾಯವಾಗಿ ಶಾಲೆಯಲ್ಲಿ ಶಿಕ್ಷಣ ಪಡೆಯಬೇಕು. ಆದರೆ ದ.ಕ.ಜಿಲ್ಲೆಯಲ್ಲಿ ಇತ್ತೀಚೆಗೆ ಶಾಲೆ ಬಿಡುತ್ತಿರುವ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಜಿಲ್ಲಾಡಳಿತ ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುವುದು.

12. (ಅ) ಶಿಕ್ಷಣ ಹಕ್ಕು ಕಾಯಿದೆಯ ಅಧ್ಯಾಯ–5ರ ಸೆಕ್ಷನ್ 29ನ್ನು ಖಾತರಿಗೊಳಿಸುವಲ್ಲಿ ಹಾಗು ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸರ್ಕಾರಿ ಶಾಲೆಗಳಲ್ಲಿ ಪ್ರತೀ ತರಗತಿಗೊಬ್ಬ ಶಿಕ್ಷಕರನ್ನು, ವಿಷಯವಾರು, ಭಾಷಾವಾರು ಹಾಗೂ ವೃತ್ತಿ ಕೌಶಲ್ಯ ಕಲಿಕೆಗಾಗಿ ಶಿಕ್ಷಕರನ್ನು ನೇಮಕ ಮಾಡಬೇಕು.

(ಆ) ಶಿಕ್ಷಣ ಹಕ್ಕು ಕಾಯಿದೆಯ ಅನ್ವಯ ಶಾಲೆಗಳಲ್ಲಿ ಶಿಕ್ಷಕರ ನೇಮಕಾತಿಯನ್ನು ಖಾತರಿಪಡಿಸುವುದು. ಹಾಗೂ ಏಕೋಪಾದ್ಯಾಯರಿರುವ ಶಾಲೆಗಳಿಗೆ ಕೂಡಲೇ ಶಿಕ್ಷಕರನ್ನು ನೇಮಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.

13. 15–18 ವರ್ಷದೊಳಗಿನ ಹದಿಹರೆಯದ ದುಡಿಯುವ ಮಕ್ಕಳ ನೋಂದಣಿ ಕಾರ್ಯವನ್ನು ನಡೆಸಿ, ಕಾಯಿದೆಯಲ್ಲಿರುವ ಮಕ್ಕಳ ಹಕ್ಕುಗಳನ್ನು ಖಾತರಿಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದು.

14. ಕೋವಿಡ್ 19 ನಂತರ ಮಕ್ಕಳು ಶೈಕ್ಷಣಿಕ ಕಲಿಕೆಗಾಗಿ ಮೊಬೈಲ್ ಬಳಕೆ ಮಾಡುತ್ತಿದ್ದು, ಅದರ ಸಮರ್ಪಕ ಬಳಕೆಯ ಜ್ಞಾನದ ಕೊರತೆಯಿಂದಾಗಿ ಹಾಗೂ ವಿಪರೀತ ಬಳಕೆಯಿಂದಾಗಿ ಮಕ್ಕಳು ಮಾನಸಿಕ ಹಾಗೂ ಭಾವನಾತ್ಮಕವಾಗಿ ಕುಬ್ಜರಾಗುತ್ತಿದ್ದಾರೆ, ಪೋಷಕರೂ ಕೂಡ ಇಂತಹ ಮಕ್ಕಳನ್ನು

ನಿಭಾಯಿಸಲು ಅಸಮರ್ಥರಾಗಿರುತ್ತಾರೆ. ಆದ್ದರಿಂದ ಪ್ರತೀ ಗ್ರಾಮಪಂಚಾಯತ್ ಮಟ್ಟದಲ್ಲಿ ಇಂತಹ ಮಕ್ಕಳಿಗಾಗಿ ಆಪ್ತಸಮಾಲೋಚಕರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುವುದು.

15. ಮಕ್ಕಳನ್ನುಕೋವಿಡ್ ಸೋಂಕಿನಿಂದ ಮುಕ್ತಗೊಳಿಸಲು ನೀಡುವ ಲಸಿಕೆಯನ್ನು ಶಾಲೆಗೆ ಬರುತ್ತಿರುವ ಮಕ್ಕಳಿಗೆ ಮಾತ್ರ ಕೇಂದ್ರೀಕರಿಸದೆ ಶಾಲೆಯಿಂದ ಹೊರಗಿರುವ ಸಮುದಾಯದಲ್ಲಿರುವ ಸರಕಾರದ ನಿಯಮಾನುಸಾರ 15–18 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಲಸಿಕೆಯನ್ನು ಕಡ್ಡಾಯವಾಗಿ ನೀಡಲು ಕ್ರಮ ಕೈಗೊಳ್ಳುವುದು.

16. ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣವನ್ನು ಗೃಹಾಧಾರಿತ ಶಿಕ್ಷಣದ ಮೂಲಕ ನಡೆಸಲಾಗುತಿದ್ದು ಪ್ರಸ್ತುತ ಈ ವ್ಯವಸ್ಥೆಯನ್ನು ಕೂಡಾ ಶಿಕ್ಷಣ ಇಲಾಖೆಯು ಸ್ಥಗಿತಗೊಳಿಸಲಾಗಿದ್ದು ಪ್ರತೀ ಬ್ಲಾಕ್ ಮಟ್ಟದಲ್ಲಿಇಂತಹ ಮಕ್ಕಳ ಶಿಕ್ಷಣದ ವ್ಯವಸ್ಥೆಗಾಗಿ ವಸತಿ ನಿಲಯಗಳನ್ನು ಕಡ್ಡಾಯವಾಗಿ ಪ್ರಾರಂಭಿಸಬೇಕು.

17. ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಸಂಬಂಧಿತ ಶಾಲಾ ವ್ಯವಸ್ಥಾಪಕರಿಗೆ ಸೂಕ್ತ ತರಬೇತಿಯನ್ನು ನೀಡಿ ಇದರ ಅನುಸರಣಾ ಪ್ರಕಿಯ್ರೆಯನ್ನು ಸಮರ್ಪಕವಾಗಿ ನಡೆಸಿ ಎಲ್ಲಾ ಮಕ್ಕಳ ರಕ್ಷಣೆಯನ್ನು ಸಂರಕ್ಷಿಸುವ ವಾತಾವರಣ ಶಾಲಾ ಹಂತದಲ್ಲಿ ನಿರ್ಮಾಣವಾಗುವಂತೆ ಶಾಲಾ ಸುರಕ್ಷಾ ಸಮಿತಿಯ ಮೂಲಕ ಶಾಲಾ ಸುರಕ್ಷಾ ನೀತಿಯನ್ನು ರಚಿಸಿ ಸುತ್ತೋಲೆಯ ಪ್ರಕಾರ ಅನುಷ್ಠಾನಗೊಳಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಬೇಕು.

18. ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಎಸ್‌ಡಿಎಂಸಿ ಸದಸ್ಯರಿಗೆ ಶಾಲಾ ಹಂತದಲ್ಲಿ ನೀಡಲಾಗುವ ನಿರಂತರವಾಗಿ 4 ದಿನಗಳ ತರಬೇತಿಯನ್ನು ನಡೆಸುವ ಬದಲು, ಹಂತಹಂತವಾಗಿ ಅಂದರೆ ಕನಿಷ್ಠ 3 ತಿಂಗಳಿಗೊಮ್ಮೆ ಒಂದು ದಿನದ ತರಬೇತಿಯನ್ನು ಆಯೋಜಿಸುವಲ್ಲಿ ಕ್ರಮ ಕೈಗೊಳ್ಳುವುದು.

19. (ಅ) ದಿನದಿಂದ ದಿನಕ್ಕೆ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳು ಹೆಚ್ಚಾಗುತ್ತಿದ್ದು ಚೈಲ್ಡ್‌ಲೈನ್ ಸೇವೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಮತ್ತು ಮಕ್ಕಳಿಗೆ ಸೂಕ್ತ ಸಮಯದಲ್ಲಿ ರಕ್ಷಣೆ ಒದಗಿಸಲು ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಚೈಲ್ಡ್‌ಲೈನ್ ಸೇವಾ ಘಟಕಗಳನ್ನು ಪ್ರಾರಂಬಿಸಲು ಕ್ರಮ ಕೈಗೊಳ್ಳುವುದು.

    (ಆ) ದ.ಕ. ಜಿಲ್ಲೆಯಲ್ಲಿ ರೈಲ್ವೆ ಚೈಲ್ಡ್‌ಲೈನ್ ಸೇವೆಯನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳುವುದು.

20. ನಗರಾಡಳಿತ ಪ್ರದೇಶದ ಆಡಳಿತ ವ್ಯವಸ್ಥೆಯಲ್ಲಿ ಶಿಕ್ಷಣ ಹಕ್ಕು ಕಾಯಿದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಂತೆ ಸುತ್ತೋಲೆಗಳನ್ನು ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

21. ಗ್ರಾಮಾಂತರ ಆಡಳಿತ ವ್ಯವಸ್ಥೆಯಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ, ಶಿಕ್ಷಣಪಡೆ ಸಮಿತಿ ಹಾಗೂ ಮಹಿಳೆಯರು ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿ ಕಾರ್ಯಾಚರಿಸುವಂತೆ ನಗರಾಡಳಿತದಲ್ಲಿಯೂ ಇಂತಹ ಸಮಿತಿಗಳನ್ನು ರಚಿಸಲು ಸುತ್ತೋಲೆಗಳನ್ನು ಹೊರಡಿಸಿ ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಖಾತರಿಗೊಳಿಸುವಲ್ಲಿ ಕ್ರಮ ಕೈಗೊಳ್ಳುವುದು.

22. ರಾಷ್ಟ್ರೀಯ ಶಿಕ್ಷಣ ನೀತಿಯು, 2022ರಿಂದಲೇ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಿದ್ದು ಬಾಲ ನ್ಯಾಯ ಕಾಯಿದೆಯನುಸಾರ 18 ವರ್ಷದೊಳಗಿನ ಎಲ್ಲಾ ಮಕ್ಕಳು ಶಿಕ್ಷಣ ಪಡೆಯುವಂತೆ ಸೂಕ್ತ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ 2019ರ ಆಶಯದಂತೆ ಸೂಕ್ತ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಗ್ರಾಮ ಪಂಚಾಯತ್ ಮಟ್ಟದಿಂದಲೇ ತಕ್ಷಣ ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವುದು.

23. ಬಾಲ ನ್ಯಾಯಕಾಯಿದೆ 2015 (ತಿದ್ದುಪಡಿ) ಜಾರಿಯಲ್ಲಿದ್ದು ಈ ಸಂಬಂಧ ರಾಜ್ಯ ಸರಕಾರವು ನಿಯಮಾವಳಿಗಳನ್ನು ರಚಿಸಿ ತಕ್ಷಣಕ್ಕೆ ಜಾರಿಗೊಳಿಸುವುದು.

24. ರಾಷ್ಟ್ರೀಯ ಶಿಕ್ಷಣ ನೀತಿಯು, 2022ರಿಂದಲೇ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬಂದಿದ್ದು ಬಾಲ ನ್ಯಾಯ ಕಾಯಿದೆಯನುಸಾರ 18 ವರ್ಷದೊಳಗಿನ ಎಲ್ಲಾ ಮಕ್ಕಳು ಶಿಕ್ಷಣ ಪಡೆಯುವಂತೆ ಸೂಕ್ತ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ 2019ರ ಆಶಯದಂತೆ ಸೂಕ್ತ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಗ್ರಾಮಪಂಚಾಯತ್ ಮಟ್ಟದಿಂದಲೇ ತಕ್ಷಣ ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವುದು.

25. ಶಿಕ್ಷಣ ಹಕ್ಕು ಕಾಯಿದೆ 2009ರನ್ವಯ ಸ್ಥಳೀಯ ಸರಕಾರವು ಶಾಲೆಗಳ ಅಭಿವೃದ್ಧಿ ಮತ್ತು ಮೇಲ್ವಿಚಾರಣೆಗಾಗಿ ಕ್ರಮ ಕೈಗೊಳ್ಳಬೇಕಾಗಿದ್ದು ಗ್ರಾಮಪಂಚಾಯತ್ ಮಟ್ಟದ GPDPಯನ್ನು ತಯಾರಿಸುವಾಗ ಶಾಲಾ ಮೂಲಭೂತ ಸೌಕರ್ಯಗಳಿಗೆ ಒತ್ತುನೀಡಿ ಯೋಜನೆಯನ್ನು ತಯಾರಿಸುವಲ್ಲಿ ಕ್ರಮ ಕೈಗೊಳ್ಳುವುದು.

26. ಬಾಲ ನ್ಯಾಯ ಕಾಯಿದೆಯನ್ವಯ ಮಕ್ಕಳನ್ನಿರಿಸುವ ಸಂಸ್ಥೆಗಳಿಗೆ ಮಕ್ಕಳ ಆರೋಗ್ಯ, ಪೋಷಣೆ ಮತ್ತು ರಕ್ಷಣೆಗೆ ಸಂಬಂಧಿಸಿ, ನೋಂದಣಾ ಕ್ರಮಗಳಿರುವಂತೆ 18 ವರ್ಷದೊಳಗಿನ ಮಕ್ಕಳಿರುವ ವಸತಿ ಶಾಲೆ (hostel) ಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ ಹೊರಡಿಸಿರುವ ನಿರ್ದೇಶನಗಳನ್ನು ಅನುಸರಿಸುವಲ್ಲಿ ಕರ್ನಾಟಕ ಶಿಕ್ಷಣ ಕಾಯಿದೆಯಡಿ ಸೇರಿಸಿಕೊಂಡು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳುವುದು. ಕೊಡಗು, ಮಂಡ್ಯ, ಬೆಳಗಾವಿ, ಬಾಗಲಕೋಟೆ, ರಾಮನಗರ, ದಾವಣಗೆರೆ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶಿಕ್ಷಣ ಹಕ್ಕಿಗಾಗಿ ಚಿಂತನೆ ಮಾಡುವ ಒಟ್ಟು 89 ಸಂಸ್ಥೆಗಳ 300 ಸದಸ್ಯರೊಂದಿಗೆ ಸೇರಿ ಮಕ್ಕಳ ಶಿಕ್ಷಣ

ಹಾಗೂ ರಕ್ಷಣೆಗಾಗಿ ವಿಶೇಷ ಚಿಂತನೆಗಳನ್ನು ನಡೆಸಿರುತ್ತಾರೆ. ಯೋಜನಾ ಸಿಬ್ಬಂದಿಗಳಾದ ಮಮತ, ರಾಜೇಶ್ವರಿ, ಜಯಕುಮಾರಿ, ಸವಿತಾರವರು, ಯೋಜನೆಯ ಕಾರ್ಯಕ್ರಮ ಮೇಲ್ವಿಚಾರಣಾ ಸಮಿತಿಯ ಸಲಹೆ ಮಾರ್ಗದರ್ಶನದೊಂದಿಗೆ ನಡೆಸಲಾಗಿದೆ.

## ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದಲ್ಲಿ ನಗರ ಸ್ಥಳೀಯಾಡಳಿತಕ್ಕಿರುವ ಅವಕಾಶಗಳು ಮತ್ತು ಸವಾಲುಗಳು ಪರಿಕಲ್ಪನೆ

ಹಾಗೆಯೇ ಸ್ಥಳೀಯ ಸರಕಾರಗಳು ಶಿಕ್ಷಣ ಹಕ್ಕು ಕಾಯಿದೆ 2009ರ ಅನುಷ್ಠಾನದ ಮೇಲ್ವಿಚಾರಣೆ ಮಾಡುವುದು ಮಾತ್ರವಲ್ಲದೆ ಮಕ್ಕಳ ರಕ್ಷಣೆ ಪೋಷಣೆ ಮಾಡುವಲ್ಲಿ ಕುಂದುಕೊರತೆಗಳು ಎದ್ದು ತೋರುತ್ತಿರುವುದನ್ನು 2 ವರ್ಷಗಳ ಅನುಭವದಲ್ಲಿ ಗಮನಿಸಲಾಗಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆ ನಾಗರಿಕ ಸಮುದಾಯವು ಇಲಾಖೆಗಳು ಹಾಗೂ ಸಂಘಸಂಸ್ಥೆಗಳೊಂದಿಗೆ ಜತೆ ಸೇರಿ ಮಣಿಪಾಲದ ಮಾಹೆ ವಿಶ್ವವಿದ್ಯಾಲಯದಲ್ಲಿ ದಿನಾಂಕ 10–11–2021ರಂದು ಕಾರ್ಯಾಗಾರವನ್ನು ಆಯೋಜಿಸಿತ್ತು. ಮುಖ್ಯವಾಗಿ ಚರ್ಚೆಗೆ ತೆಗೆದುಕೊಂಡ ವಿಚಾರಗಳು,

- ❖ ನಗರ ಸ್ಥಳೀಯ ಸರಕಾರಗಳು ಮಕ್ಕಳ ಶಿಕ್ಷಣ, ಆರೋಗ್ಯ ರಕ್ಷಣೆ ಪರ ಕಾರ್ಯ ನಿರ್ವಹಿಸಲು ಯಾವುದೇ ನಿರ್ದಿಷ್ಟ ನೀತಿ ನಿಯಮಗಳು ಅಥವಾ ಸರಕಾರದಿಂದ ಯಾವುದೇ ಸುತ್ತೋಲೆಗಳು ಇಲ್ಲದಿರುವುದರಿಂದ ನಗರಾಡಳಿತ ಪ್ರದೇಶದ ಮಕ್ಕಳಿಗೆ ಅವಕಾಶ ವಂಚಿತರಾಗುತ್ತಿದ್ದಾರೆ ಮತ್ತು ವಿಶ್ವಸಂಸ್ಥೆಯೊಂದಿಗಿನ ಒಡಂಬಡಿಕೆಯ ಪ್ರಕಾರ ಮಕ್ಕಳ ಹಕ್ಕುಗಳಿಗೆ ಮನ್ನಣೆ ಸಿಗುತ್ತಿಲ್ಲ.
- ❖ ಶಿಕ್ಷಣ ಹಕ್ಕು ಕಾಯಿದೆಯ ಅಧ್ಯಾಯ–3 ಸೆಕ್ಷನ್ 9ರ ಅಡಿಯಲ್ಲಿ ಸ್ಥಳಿಯ ಸರಕಾರವು ಪ್ರಾಥಮಿಕ ಶಿಕ್ಷಣದ ಮೇಲುಸ್ತುವಾರಿ ನಿರ್ವಹಿಸುವಲ್ಲಿ ಪಂಚಾಯತ್ ರಾಜ್/ನಗರ ಮತ್ತು ಪುರಸಭೆಯ ಪಾತ್ರವನ್ನು ಶಿಕ್ಷಣ ಹಕ್ಕು ಕಾಯಿದೆಯಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಗ್ರಾಮ ಸ್ಥಳೀಯ ಸರಕಾರದ ಮಟ್ಟದಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅನುಷ್ಠಾನ ಮಾಡುವಲ್ಲಿ ಕೆಲವೊಂದು ಸುತ್ತೋಲೆಗಳನ್ನು ಹೊರಡಿಸಿದೆಯಾದರೂ ಇವು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲ.
- ❖ ಮಕ್ಕಳ ಶಿಕ್ಷಣ ಹಾಗೂ ರಕ್ಷಣೆಗೆ ಸಂಬಂಧಿಸಿದಂತೆ ಗ್ರಾಮ ಸ್ಥಳೀಯ ಸರಕಾರಗಳಿಗೆ ಸೂಕ್ತ ಆದೇಶಗಳನ್ನು ನೀಡಿ ಶಿಕ್ಷಣ ಪಡೆ ಸಮಿತಿ ಮತ್ತು ಮಹಿಳಾ ಮತ್ತು ಮಕ್ಕಳ ರಕ್ಷಣಾ ಕಾವಲು ಸಮಿತಿಗಳ ರಚನೆಯಾಗಬೇಕಾಗಿದ್ದರೂ ಇವನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವಲ್ಲಿ ವಿಫಲತೆಯಾಗಿದೆ.
- ❖ ಸ್ಥಳೀಯ ಸರಕಾರವು ಶಾಲಾ ಮಟ್ಟದಲ್ಲಿ ಮಕ್ಕಳ ಶಿಕ್ಷಣ, ರಕ್ಷಣೆ ಹಾಗೂ ಪೋಷಣೆ ಮತ್ತು ಶಾಲಾ ಮೂಲಭೂತ ಸೌಕರ್ಯಗಳ ಮೇಲುಸ್ತುವಾರಿಯಲ್ಲಿ ಪಾಲು ತೆಗೆದುಕೊಳ್ಳುವಲ್ಲಿಯೂ ಕೊರತೆಗಳಿವೆ.

ಹೀಗಾಗಿ ಸ್ಥಳೀಯ ಸರಕಾರಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಮತ್ತು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸಲು ಆರ್‌ಟಿಇ ಅನುಸರಣೆಗಳನ್ನು ಪೂರೈಸಲು ಶಾಲಾ ಆಧಾರಿತ ಎಸ್‌ಡಿಎಂಸಿ ತರಬೇತಿಯ ಮಹತ್ವವನ್ನು ಅರ್ಥ ಮಾಡಿಕೊಂಡು ನಗರ ಪ್ರದೇಶದ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಶಿಕ್ಷಣದ ಮೂಲಕ ಸರ್ವಾಂಗೀಣ ಅಭಿವೃದ್ಧಿಯನ್ನು ಖಾತರಿಗೊಳಿಸುವುದು ಅತೀ ಅಗತ್ಯವಾಗಿದೆ.

ಕಾರ್ಯಾಗಾರದಲ್ಲಿ ಭಾಗಿಗಳಾಗಿ ಜಿಲ್ಲಾಧಿಕಾರಿಗಳು ನಗರ ಸ್ಥಳೀಯ ಸರಕಾರದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸಂಬಂಧಿಸಿದ ಉಪಸಮಿತಿಗಳ ಸದಸ್ಯರುಗಳು, ಕೌನ್ಸಿಲರ್ ಗಳು, ಸ್ವಯಂಸೇವಾ ಸಂಸ್ಥೆಗಳು, ಅಭಿವೃದ್ಧಿ ಪರ ಚಿಂತಕರು, ಸಂಶೋಧಕರು ಜತೆ ಸೇರಿ ಸಮಾಲೋಚನೆಯನ್ನು ನಡೆಸಬೇಕಾಗಿದೆ. ಸಮಾಲೋಚನೆಯಲ್ಲಿ ಈ ಕೆಳಗಿನ ವಿಚಾರಗಳನ್ನು ಮಂಡನೆ ಮಾಡಲಾಯಿತು.

1. ನಗರದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸ್ಥಳೀಯಾಡಳಿತಗಳ ಪಾತ್ರ ಮತ್ತು ಸವಾಲುಗಳು
2. ನಗರಾಡಳಿದಲ್ಲಿ ಮಕ್ಕಳಿಗೆ ಸಂಬಂಧಿಸಿ ಶಿಕ್ಷಣ ಹಕ್ಕು ಕಾಯಿದೆ 2009ನ್ನು ಅನುಷ್ಠಾನಿಸಲು ಇಲಾಖೆಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಅವಕಾಶಗಳು

ಕೋವಿಡ್ 19 ಮಕ್ಕಳ ಮೇಲಿನ ಹೆಚ್ಚಿನ ನಿಗಾವಹಿಸಿ ಯೋಜನೆಯು ದ.ಕ. ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯ 24 ಸ್ಥಳೀಯ ಸರಕಾರಗಳ ಒಟ್ಟು 800 ಕುಟುಂಬಗಳಿಗೆ ಕೋವಿಡ್ ಕಿಟ್ ವಿತರಣೆ ಮಾಡುವುದರ ಮೂಲಕ ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಮಕ್ಕಳಿಗಾಗುವ ವಿವಿಧ ರೀತಿಯ ತೊಂದರೆಗಳು, ಸರಕಾರದ ನೀತಿಗಳು, ಶಾಲೆಯಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಗೆ ಹಾಗೂ ಎಸ್‌ಡಿಎಂಸಿಯವರ ಪಾತ್ರ, ಕೋವಿಡ್ ಮುನ್ನೆಚ್ಚರಿಕೆ ಹಾಗೂ ನೀತಿಪಾಲನೆಗಾಗಿ ಸ್ಥಳೀಯ ಸರಕಾರಗಳ ಮೇಲುಸ್ತುವಾರಿ ಅಗತ್ಯತೆ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಗಳನ್ನು 24 ಸ್ಥಳೀಯ ಸರಕಾರದ ಫಲಾನುಭವಿಗಳಿಗೆ ನೀಡಲಾಗಿದೆ. ಈ ಸಂಧರ್ಭದಲ್ಲಿ ಮುದ್ರಿಸಲಾದ ಮಾಹಿತಿ ಕರಪತ್ರವನ್ನು ನೀಡಲಾಗಿದ್ದು ಆಯಾ ಪ್ರದೇಶದ ಜನಸಮುದಾಯಕ್ಕೆ ವಿತರಿಸುವ ಏರ್ಪಾಡನ್ನೂ ಮಾಡಲಾಗಿದೆ.

ಮಕ್ಕಳು ಕೋವಿಡ್ 19 ಇದರ ಕುರಿತಾಗಿ ಸಂಪೂರ್ಣ ಮಾಹಿತಿಯನ್ನು ಹೊಂದಿ ಇತರ ಮಕ್ಕಳಿಗೂ ಈ ಬಗ್ಗೆ ಮಾಹಿತಿ ನೀಡಲು ಪ್ರೇರೇಪಿಸುವ ವಿಶೇಷವಾದ ಮಕ್ಕಳ ಆಕರ್ಷಕ ಕೋವಿಡ್ ಮಾಹಿತಿ ಪುಸ್ತಕವನ್ನು ಮುದ್ರಣ ಮಾಡಲಾಗಿದೆ. ಈ ಪುಸ್ತಕಗಳು ಕರ್ನಾಟಕಾದ್ಯಂತ ಎಲ್ಲಾ ಮಕ್ಕಳ ಕೈಸೇರಿ ಮಕ್ಕಳ ಆರೋಗ್ಯ ಸುರಕ್ಷೆಗೆ ಪೂರಕವಾಗಬೇಕೆಂಬುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ.

## ಯೋಜನಾ ಅನುಷ್ಠಾನದ ಸಮಯದಲ್ಲಿ ಮುದ್ರಣಗೊಂಡ ಮಾಹಿತಿ ಕರಪತ್ರಗಳು

- ❖ ಕೋವಿಡ್ ಮುಕ್ತ ಶಾಲಾ ಪರಿಕಲ್ಪನಾ ತಪಶೀಲು ಪಟ್ಟಿ –ಎಸ್‌ಡಿಎಂಸಿ ಸದಸ್ಯರ ಜವಾಬ್ದಾರಿಗಳು
- ❖ ಕೋವಿಡ್ ಮುಕ್ತ ಗ್ರಾಮ ಪರಿಕಲ್ಪನಾ ತಪಶೀಲು ಪಟ್ಟಿ – ಸ್ಥಳೀಯ ಸರಕಾರಗಳ ಸದಸ್ಯರ ಜವಾಬ್ದಾರಿಗಳು
- ❖ ಕೋವಿಡ್ ಲಸಿಕಾ ಕುರಿತು ಜನಸಾಮಾನ್ಯರಿಗೆ ಸ್ಪಷ್ಟಮಾಹಿತಿ ಕರಪತ್ರ
- ❖ ಮಕ್ಕಳೇ ಇದು ನಿಮಗೆ ತಿಳಿದಿದೆಯೇ – ಕೋವಿಡ್ ಮಾಹಿತಿ ಮಕ್ಕಳಿಗಾಗಿ ಕೈಪಿಡಿ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಕರ್ನಾಟಕ ಮಕ್ಕಳ ರಕ್ಷಣಾ ಆಯೋಗದ ಸಹಭಾಗಿತ್ವದೊಂದಿಗೆ ಮಕ್ಕಳ ಹಕ್ಕುಗಳ ಮಾಸೋತ್ಸವ ಅಂಗವಾಗಿ ಕೋವಿಡ್ 19ರ ಅಂಗವಾಗಿ ಜರುಗಿದ ಸಾರ್ವಜನಿಕರಿಂದ ಅಹವಾಲು ವಿಚಾರಣಾ ಸಂಧರ್ಭದಲ್ಲಿ ದ.ಕ. ಜಿಲ್ಲೆಯ ಪಂಚಾಯತ್ ವ್ಯಾಪ್ತಿಯ 15 ಮಕ್ಕಳು ಭಾಗಿಗಳಾಗಿದ್ದು, ಮಕ್ಕಳ ಹಕ್ಕುಗಳು, ರಕ್ಷಣೆ, ಶಿಕ್ಷಣ ಕುರಿತಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಸಭೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮುಂದಿಟ್ಟು, ಜಿಲ್ಲೆಯ ಮಕ್ಕಳ ಪರವಾಗಿ ಪ್ರತಿನಿಧಿತ್ವ ನೀಡಿರುತ್ತಾರೆ. ಈ ಮಕ್ಕಳಲ್ಲಿ ಆಯ್ಕೆಯಾದ 5 ಮಕ್ಕಳು ರಾಜ್ಯ ಮಟ್ಟದ ಸಮಾವೇಶದಲ್ಲಿ ಭಾಗಿಗಳಾಗಿ ಅಹವಾಲುಗಳನ್ನು ಮಂಡಿಸಿರುತ್ತಾರೆ.



# ಶಾಲಾ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಎಸ್.ಡಿ.ಎಂ.ಸಿ ವಕೀಲಿ ಕ್ರಮಗಳು ಕುರಿತ ಪರಿಕಲ್ಪನೆ

ಶಿಕ್ಷಣವು ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ಹೊಂದಿದೆ. ದೇಶದ ಪ್ರತಿಯೊಂದು ಮಗು ಶಿಕ್ಷಣದಿಂದ ವಂಚಿತರಾಗದೆ ಗುಣಮಟ್ಟದ ಶಿಕ್ಷಣ ಪಡೆಯಬೇಕೆಂಬುದು ಸರಕಾರದ ಆಶಯವಾಗಿದೆ. ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಲಾಗಿದ್ದು ಹೊಸ ಶಿಕ್ಷಣ ನೀತಿಯನ್ನು ಕೂಡಾ 2021 ರಲ್ಲಿ ಜಾರಿಗೊಳಿಸಲಾಗಿದೆ. ಮತ್ತು ಈ ನೀತಿಯ ಪ್ರಕಾರ 18 ವರ್ಷದ ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣದಲ್ಲಿ ಉಳಿಸಿ ಬೆಳೆಸಬೇಕಾಗಿದೆ. ಹಾಗೂ 6ರಿಂದ 14 ವರ್ಷದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಮಕ್ಕಳ ಶಿಕ್ಷಣದ ಹಕ್ಕಿನ ಕಾಯಿದೆ 2009ರಲ್ಲಿ ಜಾರಿಗೆ ಬಂದಿದೆ. ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡಲು ಸರಕಾರವು ಶ್ರಮಿಸುತ್ತಿದೆ. ಗ್ರಾಮೀಣ ಪ್ರದೇಶದ ಎಲ್ಲಾ ಮಕ್ಕಳಿಗೆ ಸುಲಭವಾಗಿ ಶಿಕ್ಷಣ ದೊರೆಯುವಂತಾಗಲು ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ನಡೆಸಲಾಗುತ್ತಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ಯ ಅಧಿನಿಯಮ 1993ರ ಪ್ರಕರಣ 58ರಲ್ಲಿ ಉಲ್ಲೇಖಿಸಿರುವ ಗ್ರಾಮ ಪಂಚಾಯತಿಗಳ ಪ್ರಕಾರ್ಯಗಳಲ್ಲಿ ಶಾಲೆಯ ಅಭಿವೃದ್ಧಿಯು ಸೇರಿದೆ. ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ 2009ರ ಅಧ್ಯಾಯ 3ರಲ್ಲಿ ಕೂಡಾ ಸ್ಥಳೀಯ ಸರಕಾರದ ಜವಾಬ್ದಾರಿಯನ್ನು ಉಲ್ಲೇಖಿಸಲಾಗಿರುತ್ತದೆ. ಶಾಲೆಗಳಿಗೆ ಬೇಕಾಗುವ ಮೂಲಭೂತ ಸೌಕರ್ಯಗಳಾದ ನಿವೇಶನ, ಕಟ್ಟಡ, ದಾಸ್ತನು ಕೊಠಡಿ, ಅಡುಗೆ ಕೋಣೆ, ಕಟ್ಟಡ ದುರಸ್ಥಿ, ಕಾಂಪೌಂಡು ನಿರ್ಮಾಣ, ವಿದ್ಯುತ್ ಸಂಪರ್ಕ ಮತ್ತು ಬಿಲ್ಲು ಪಾವತಿ, ಕುಡಿಯುವ ನೀರು ಸರಬರಾಜು, ಶುದ್ಧ ಕುಡಿಯುವ ನೀರಿನ ವಾಟರ್ ಫಿಲ್ಟರ್, ಶೌಚಾಲಯ ನಿರ್ಮಾಣ, ಕೈತೋಟ ನಿರ್ಮಾಣ, ಆಟದ ಸಲಕರಣೆ, ಮಗುಸ್ನೇಹಿ ಆರಾಮದಾಯಕ ಡೆಸ್ಕ್, ಬೆಂಚುಗಳು, ಟೇಬಲ್‌ಗಳು, ಗೋಡೆ ಬರಹ ಮುಂತಾದ ನೆರವುಗಳನ್ನು ಒದಗಿಸಬಹುದಾಗಿದೆ. ಗ್ರಾಮ ಪಂಚಾಯತ್‌ಗಳು ಈ ಉದ್ದೇಶಕ್ಕಾಗಿ ತಮ್ಮ ಸ್ವಂತ ಸಂಪನ್ಮೂಲ ಆದಾಯ, ಕೇಂದ್ರ ಸರಕಾರದ 15ನೇ ಹಣಕಾಸು ಆಯೋಗದ ಅನುದಾನ, ರಾಜ್ಯ ಸರಕಾರದ ಶಾಸನಬದ್ಧ ಅನುದಾನ, ಜಲಜೀವನ್ ಮಿಷನ್, ನರೇಗಾ ಮತ್ತು ಇತರ ಯೋಜನೆಗಳ ಅನುದಾನಗಳನ್ನು ಬಳಸಿಕೊಳ್ಳಬಹುದಾಗಿದೆ.

ಈ ಬಗ್ಗೆ ಗ್ರಾಮ ಪಂಚಾಯತ್ ಸಭೆಗಳಲ್ಲಿ, ತ್ರೈಮಾಸಿಕವಾಗಿ ನಡೆಯುವ ಕೆ.ಡಿ.ಪಿ. ಸಭೆಗಳಲ್ಲಿಯೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಭಾಗವಹಿಸಿ ಚರ್ಚಿಸುವುದರ ಮೂಲಕ ಗ್ರಾಮ ಪಂಚಾಯತಿಯಿಂದ ಅಗತ್ಯ ನೆರವು ಪಡೆಯಲು ಕ್ರಮ ಕೈಗೊಳ್ಳಬಹುದಾಗಿದೆ. ಗ್ರಾಮ ಪಂಚಾಯತ್‌ನ ದೂರದೃಷ್ಟಿ ಯೋಜನೆಯಲ್ಲಿಯೂ ಸಹ ಮೂಲ ಸೌಕರ್ಯಗಳ ಅವಶ್ಯಕತೆಯನ್ನು ಸೇರಿಸಿಕೊಳ್ಳಬಹುದಾಗಿದೆ. ಹಾಗೂ ಗ್ರಾಮ ಪಂಚಾಯತ್‌ನಲ್ಲಿ ಅನುದಾನ ಕೊರತೆಯಾದಲ್ಲಿ ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಲ್ಲಿಯೂ

ಅಳವಡಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಬಹುದಾಗಿದೆ. ಮತ್ತು ಗ್ರಾಮ ಪಂಚಾಯತಿಗಳು ಶಾಲೆಗಳಿಗೆ ನೀಡಿದ ಭೇಟಿ ಹಾಗು ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ಪಂಚತಂತ್ರದಲ್ಲಿ ಅಳವಡಿಸಲು ತಿಳಿಸಲಾಗಿದೆ ಎಂದು ಸರಕಾರದ ಕರಾವಿಯೋ&ಆಸ/71/ಉಪಾ/2021/22 ರಲ್ಲಿ ತಿಳಿಸಲಾಗಿದೆ.

ಶಾಲಾ ಮೂಲಭೂತ ಸೌಕರ್ಯಗಳಾದ ನಿವೇಶನ, ಕಟ್ಟಡ, ದಾಸ್ತಾನುಕೊಠಡಿ, ಅಡುಗೆಕೋಣೆ, ಕಟ್ಟಡ ದುರಸ್ಥಿ, ಕಾಂಪೌಂಡು ನಿರ್ಮಾಣ, ವಿದ್ಯುತ್ ಸಂಪರ್ಕ ಮತ್ತು ಬಿಲ್ಲು ಪಾವತಿ, ಕುಡಿಯುವ ನೀರು ಸರಬರಾಜು, ವಾಟರ್ ಫಿಲ್ಟರ್, ಶೌಚಾಲಯ ನಿರ್ಮಾಣ, ಕೈತೋಟ, ಆಟದ ಸಲಕರಣೆ, ಡೆಸ್ಕ್, ಬೆಂಚುಗಳು, ಮೇಜುಗಳು, ಗೋಡೆ ಬರಹ ಇತ್ಯಾದಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಶಾಲಾ ಎಸ್.ಡಿ.ಎಂ.ಸಿಗಳನ್ನು ಸಶಕ್ತಗೊಳಿಸಿದಾಗ ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಂದ ದಾನಿಗಳಿಂದ ಮತ್ತು ಸಂಘಸಂಸ್ಥೆಗಳಿಂದ ಶಾಲಾ ಅಭಿವೃದ್ಧಿಗಾಗಿ ಆರ್ಥಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಸಶಕ್ತವಾಗುತ್ತದೆ. ಮತ್ತು ಈ ಪ್ರಕ್ರಿಯೆಯಲ್ಲಿ ಮುಂದುವರಿಯಲು ಎಸ್.ಡಿ.ಎಂ.ಸಿಗಳು ಸಮರ್ಪಕವಾಗಿ ಮುಂದುವರಿಯಲು ವಕೀಲಿ ಕ್ರಮಗಳನ್ನು ನಡೆಸುವುದು ಅತೀ ಅಗತ್ಯವಾಗಿದೆ.

ಆದರೆ ಈ ಬಗ್ಗೆ ಎಸ್‌ಡಿಎಂಸಿಗೆ ಶಾಲಾ ಹಂತದಲ್ಲಿ ಕಾಲಕಾಲಕ್ಕೆ ತರಬೇತಿಯ ಮೂಲಕ ಮಾಹಿತಿ ಪೂರೈಕೆಯನ್ನು ಶಿಕ್ಷಣ ಇಲಾಖೆಯು ನೀಡುವುದು ಕೂಡಾ ಅತೀ ಮುಖ್ಯವಾದ ಕರ್ತವ್ಯವಾಗಿದೆ. ಒಟ್ಟಾರೆಯಾಗಿ ಸಮಾಜದ ಎಲ್ಲಾ ವರ್ಗದ ಮಕ್ಕಳಿಗೂ ಶಿಕ್ಷಣ, ರಕ್ಷಣೆ ಮತ್ತು ಪೋಷಣೆಯಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಮಾತ್ರದಲ್ಲಿ ಜವಾಬ್ದಾರಿಯಾಗಬೇಕಾಗಿದೆ.

ಕಸ್ತೂರಿ ಬೊಳುವಾರು, ತರಬೇತಿ ಸಂಯೋಜಕರು







ಬೆಂಗಳೂರು ವಿಭಾಗದ ರಾಮನಗರ ಜಿಲ್ಲೆಯ ಚೆನ್ನಪಟ್ಟಣ ತಾಲೂಕಿನಲ್ಲಿರುವ ಮತ್ತಿಕೆರೆ ವಲಯದ ಚಿಕ್ಕಮಾಳೂರು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಶಿಕ್ಷಣ ಹಕ್ಕು ಕಾಯಿದೆಯನ್ವಯ ಮಗುಸ್ನೇಹಿ ಶಾಲಾ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುತ್ತಿದೆ. ಮಕ್ಕಳ ದೈಹಿಕ ಬೆಳವಣಿಗೆಯೆಡೆ ಚಿಂತನೆ ಮಾಡಿ ಶಾಲಾ ಆಟದ ಮೈದಾನವನ್ನು ಶುಚಿಗೊಳಿಸಿ ತಯಾರುಗೊಳಿಸುತ್ತಿದ್ದಾರೆ. ಇದನ್ನು ಸಂಪೂರ್ತಿಗೊಳಿಸಲು ಪ್ರಕ್ರಿಯೆಗಳು ನಡೆಯುತ್ತಿವೆ.

**ಶಿಕ್ಷಣ ಹಕ್ಕು ಕಾಯಿದೆ 2009ರ ಸಮರ್ಪಕ ಅನುಷ್ಠಾನದಲ್ಲಿ ನಗರಾಡಳಿತಕ್ಕಿರುವ ಸವಾಲುಗಳು ಮತ್ತು ಅವಕಾಶಗಳ ಕುರಿತಾಗಿ ರಾಜ್ಯಮಟ್ಟದ ಕಾರ್ಯಾಗಾರವನ್ನು ದಿನಾಂಕ 14–3–2022ರಂದು ಮಾಹೆ ಮಣಿಪಾಲದಲ್ಲಿ ನಡೆಸಲಾಯಿತು**





ಬೆಂಗಳೂರು ವಿಭಾಗದ ರಾಮನಗರ ಜಿಲ್ಲೆಯ ಚೆನ್ನಪಟ್ಟಣ ತಾಲೂಕಿನಲ್ಲಿರುವ ಮತ್ತಿಕೆರೆ ವಲಯದ ಮುದಗೆರೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಶಿಕ್ಷಣ ಹಕ್ಕು ಕಾಯಿದೆಯನ್ವಯ ಮಗುಸ್ನೇಹಿ ಶಾಲಾ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡು ಶಾಲೆಯ ಸೌಂದರೀಕರಣ ಮತ್ತು ಸುಸಜ್ಜಿತ ಹೊಸ ಶಾಲಾ ತರಗತಿ ಕೋಣೆಗಳನ್ನು ನಿರ್ಮಾಣ ಮಾಡಿರುತ್ತಾರೆ.




ನೂತನ ಶಾಲಾ
ತರಗತಿ ಕಟ್ಟಡ




ಗಂಡು ಮತ್ತು
ಹೆಣ್ಣುಮಕ್ಕಳಿಗೆ ಪ್ರತ್ಯೇಕ
ಶೌಚಾಲಯ, ಸಾಕಷ್ಟು
ನೀರಿನ ಹಾಗೂ ಎಲ್ಲಾ
ನೈರ್ಮಲೀಕರಣ
ವ್ಯವಸ್ಥೆಯೊಂದಿಗೆ

ಕೋಲೂರು ಸರಕಾರಿ ಶಾಲೆಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ತನ್ನ ಶಾಲೆಯ ಅಭಿವೃದ್ಧಿ ಕಾರ್ಯಗಳೆಡೆ ಗಮನಹರಿಸಲು ತೊಡಗಿಕೊಂಡು ಶಿಕ್ಷಣ ಹಕ್ಕು ಕಾಯಿದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರಯತ್ನಿಸುತ್ತಿದೆ.














**Information, Education and Commination (ಐಇಸಿ) ಪರಿಕರಗಳನ್ನು ತಯಾರಿಸಿ, ಮುದ್ರಿಸಿ ವಿತರಿಸುವ ಮೂಲಕ ಯೋಜನೆಯ ಪರಿಕಲ್ಪನೆಯನ್ನು ಸುಲಭ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪಿಸುವ ಮೂಲಕ ಗುಣಾತ್ಮಕ ಶಿಕ್ಷಣ**









# ಸುರಕ್ಷಿತ ಶಾಲೆಯ ಪರಿಕಲ್ಪನೆ

ಶೈಕ್ಷಣಿಕ ಸಂಸ್ಥೆಗಳು ಮಗು ಎದುರಿಸುತ್ತಿರುವ ಮಾನಸಿಕ, ಭಾವನಾತ್ಮಕ, ಗ್ರಹಿಕಾತ್ಮಕ, ಸಾಮಾಜಿಕ, ಸಾಂಸ್ಕೃತಿಕ, ಬೌಗೋಳಿಕ ಅಥವ ಭೌತಿಕ ಸಂಕಷ್ಟಗಳನ್ನು ವಿವಿಧ ಆಯಾಮಗಳಡಿ ತುಲನೆ ಮಾಡಿ ಮಕ್ಕಳಿಗೆ ಶಾಲಾ ಪರಿಸರದಲ್ಲಿ ರಕ್ಷಣೆ ನೀಡುವುದನ್ನು ಖಾತರಿಪಡಿಸುವುದು ಮತ್ತು ಅದಕ್ಕೆ ಬೇಕಾದ ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳುವುದು ಅತೀ ಅಗತ್ಯವಾಗಿದೆ.

ಸುರಕ್ಷಿತ ಶಾಲಾ ವಾತಾವರಣವು ಭಾರತ ಸಂವಿಧಾನ ಮತ್ತು ಶಾಸನಗಳಡಿಯಲ್ಲಿ ಮಕ್ಕಳು ಮತ್ತು ಅವರ ಹಕ್ಕುಗಳ ಕುರಿತಂತೆ ತಿಳಿಸಿರುವ ಅಂಶಗಳನ್ನು ಗೌರವಿಸುವುದರ ಆಧಾರದ ಮೇಲೆ ನಿಂತಿದೆ, ಮಕ್ಕಳ ಮೇಲೆ ಯಾವುದೇ ರೀತಿಯ ಹಲ್ಲೆ, ಕಿರುಕುಳ ಮತ್ತು ನಿಂದನೆಯಿಂದ ಮುಕ್ತವಾದ ವಾತಾವರಣ ಮಕ್ಕಳಿಗೆ ಶಾಲಾ ವಾತಾವರಣದಲ್ಲಿ ಲಭ್ಯತೆಯಾಗಬೇಕು. ಅದಕ್ಕಾಗಿ ಶಿಕ್ಷಕರು, ಪೋಷಕರು, ಸಮುದಾಯ ಮತ್ತು ಪ್ರಮುಖವಾಗಿ ಮಕ್ಕಳೂ ಸೇರಿದಂತೆ ಇತರ ಭಾಗೀದಾರರ ಜೊತೆಗೂಡಿ ಕಾರ್ಯನಿರ್ವಹಿಸಬೇಕಾಗಿದೆ. ಸುರಕ್ಷಿತ ಶಾಲಾ ಪರಿಸರವು ಮಗುವಿನ ಸಕಾರಾತ್ಮಕ ಹಾಗು ಒಟ್ಟಾರೆ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸುವುದಾಗಿದೆ.

ಸುರಕ್ಷಿತ ಶಾಲಾ ಪರಿಸರದ ಕಲ್ಪನೆಯು ಒಂದು ಸಮರ್ಥ ಮತ್ತು ಸಬಲ ಪ್ರಕ್ರಿಯೆಯಾಗಿದ್ದು ಆ ಮೂಲಕ ಎಲ್ಲ ಮಕ್ಕಳನ್ನು ಮತ್ತು ಅವರ ಹಕ್ಕುಗಳನ್ನು ಕೇಂದ್ರೀಕರಿಸುವ ಆಶಾದಾಯಕ ವಾತಾವರಣವನ್ನು ಒದಗಿಸುವುದಾಗಿದೆ.

## ಸುರಕ್ಷಿತ ಶಾಲಾ ಮೌಲ್ಯಗಳು

**1. ಮಗು ಕೇಂದ್ರಿತ ವಿಧಾನ:** ಇದು ಮಕ್ಕಳನ್ನು ಸಮಗ್ರವಾಗಿ ಗುರುತಿಸುವ ಒಂದು ಪ್ರಮುಖ ಮೌಲ್ಯವಾಗಿದ್ದು ಪ್ರತಿಯೊಂದು ಮಗುವು ತನ್ನ ಅನುಭವಗಳು ಮತ್ತು ಅಭಿಪ್ರಾಯಗಳ ಮೂಲಕ ಕೊಡುಗೆ ನೀಡುವುದಾಗಿದೆ. ಮಗು ಕೇಂದ್ರಿತ ವಿಧಾನದಲ್ಲಿ ಮುಖ್ಯವಾಗಿ ಮಗುವಿನ ಅತ್ಯುತ್ತಮ ಹಿತಾಸಕ್ತಿಗಳಾದ ಅನಿಸಿಕೆ, ಇಚ್ಛೆ ಮತ್ತು ಕಾಳಜಿಯನ್ನು ಪರಿಗಣಿಸಿ ನಿರ್ಧರಿಬಹುದು. ಇದರಿಂದ ಎಲ್ಲಾ ಮಕ್ಕಳಿಗೆ ಭಾಗವಹಿಸಲು ಮತ್ತು ಕಲಿಕೆಯ ಅವಕಾಶಗಳಿಂದ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಈ ವಿಧಾನದಲ್ಲಿ ಒಂದು ವೇಳೆ ಮಗುವೇ ಹಲ್ಲೆ ನಡೆಸಿದ್ದಲ್ಲಿ ನಡೆಸುವ ಪ್ರಕ್ರಿಯೆಯು ಕಾನೂನಿನೊಡನೆ ಸಮರ್ಘದಲ್ಲಿರುವ ಮಕ್ಕಳ ಕುರಿತಾಗಿ ಇರುವಂತಹ ಸುಧಾರಣಾತ್ಮಕ ಮತ್ತು ಪುನರ್ವಸತಿಯ ಸೇವೆಗಳಡಿಯಲ್ಲಿ ಮಗುವನ್ನು ಸುರಕ್ಷಿತ ವಾತಾವರಣದಲ್ಲಿ ರಕ್ಷಿಸಲು ಕ್ರಮ ಕೈಗೊಳ್ಳಬೇಕಾಗಿದೆ.

**2. ಸ್ವ ನಿರ್ಧಾರ:** ಮಕ್ಕಳು ತಮ್ಮ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲಾ ವಿಷಯಗಳು ಹಾಗೂ ಅವರ ಸ್ವಂತ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಮತ್ತು ಸಂಬಂಧಿಸಿದ ತೀರ್ಮಾನಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿಕೊಳ್ಳುತ್ತಾರೆ. ಸ್ವ ನಿರ್ಧಾರವು ಸುರಕ್ಷಿತ ಶಾಲಾ ಪರಿಸರದಲ್ಲಿ ಮಗುವು ಸಕ್ರೀಯವಾಗಿ ತೊಡಗಿಸಿಕೊಳ್ಳಲು ಮತ್ತು ಕಾಳಜಿ ವಹಿಸಬೇಕಾದ ವಿಷಯಗಳ ಕುರಿತು ವರದಿ ಮಾಡಲು ಸಮರ್ಥವಾಗಿಸುತ್ತದೆ. ಆದುದರಿಂದ ವಯಸ್ಕರ ಅಭಿಪ್ರಾಯಗಳಿಗಿಂತ ಮಕ್ಕಳ ಅಭಿಪ್ರಾಯಗಳು ಭಿನ್ನಾವಾಗಿದ್ದಾಗಲು ಮಕ್ಕಳ ಅಭಿಪ್ರಾಯಗಳನ್ನು ಗೌರವಿಸುವ ಆಲಿಸುವ ಮತ್ತು ಮಕ್ಕಳ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರೋತ್ಸಾಹದಾಯಕ ವಾತಾವರಣವನ್ನು ಒದಗಿಸಬೇಕಾಗಿದೆ.

**3. ಮಗುವಿನ ಭಾಗವಹಿಸುವಿಕೆ:** ಮಗುವಿನ ಭಾಗವಹಿಸುವಿಕೆಯು ಶಾಲೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರೀಯವಾಗಿ ಭಾಗವಹಿಸುವುದಾಗಿದೆ. ಮಕ್ಕಳ ಮಾತನ್ನು ಆಲಿಸುವ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಗಳನ್ನು ನೀಡಿ ಶಾಲೆಯ ಒಳಗೆ ಮತ್ತು ಹೊರಗೆ ಶೈಕ್ಷಣಿಕ ಚಟುವಟಿಕೆಗಳ ಯೋಜನೆ, ಶೈಕ್ಷಣಿಕ ಚಟುವಟಿಕೆಗಳ ಮೌಲ್ಯಮಾಪನದಲ್ಲಿ ತೊಡಗಿಸಿಕೊಂಡು ಅವರ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಳ್ಳುವುದಾಗಿದೆ.

**4. ಮಕ್ಕಳ ಸ್ನೇಹಿ ಭಾಷೆ :** ಮಕ್ಕಳೊಂದಿಗೆ ನಡೆಸುವ ಎಲ್ಲಾ ಸಂವಹನವು ಮಕ್ಕಳ ಸ್ನೇಹಿಯಾಗಿದ್ದು ಅವರ ಮನಸ್ಸಿಗೆ ಅನುಗುಣವಾಗಿರಬೇಕು ಮತ್ತು ಸಂವಹನವು ಮಗುವಿನಲ್ಲಿ ಭಯ ಹುಟ್ಟಿಸುವಿಕೆ ಅಥವಾ ಮುಜುಗರ ಅವಮಾನ ಅಥವಾ ಅವರ ಸ್ವಾಭಿಮಾನ ಮತ್ತು ಘನತೆಯನ್ನು ಕೆಳಮಟ್ಟಕ್ಕೆ ಇಳಿಸುವಂತಿರಬಾರದು.

**5. ತಾರತಮ್ಯ ರಹಿತ ಅವಕಾಶ ಕಲ್ಪಿಸುವಿಕೆ:** ಸುರಕ್ಷಿತ ಶಾಲೆಗಳು ಬದಲಿಸಲಾಗದ ತತ್ವಗಳಾದ ಸಮಾನತೆ, ನ್ಯಾಯ ಮತ್ತು ತಾರತಮ್ಯ ರಹಿತ ಆಧಾರಿತವಾಗಿರುತ್ತದೆ. ಶಾಲೆಗಳು ಎಲ್ಲಾ ಮಕ್ಕಳಿಗೆ ಸಮಾನ ಕಲಿಕೆ ಮತ್ತು ಬೆಳವಣಿಗೆಗೆ ಅವಕಾಶಗಳನ್ನು ಒದಗಿಸುವುದನ್ನು ಖಚಿತ ಪಡಿಸಿಕೊಳ್ಳುವುದು ಶಾಲೆಯಲ್ಲಿ ಇತರೆ ಮಕ್ಕಳಿಂದ ಅಥವಾ ವಯಸ್ಕರಿಂದ ಮಕ್ಕಳಿಗೆ ಯಾವ ರೀತಿಯ ತಾರತಮ್ಯ ಮಾಡುವುದು ಕಂಡುಬಂದಲ್ಲಿ ಅಂತಹ ವಿಷಯಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದಾಗಿದೆ.

ಈ ಕುರಿತಾಗಿ ಪ್ರತೀ ಶೈಕ್ಷಣಿಕ ಸಂಸ್ಥೆಗಳು ಅತೀ ಮುಖ್ಯ ಪಾತ್ರವನ್ನು ವಹಿಸುತ್ತಾ ಸರಕಾರದ ಆದೇಶದನ್ವಯ ಮಕ್ಕಳ ರಕ್ಷಣಾ ನೀತಿಯನ್ನು ಪ್ರತೀ ಶಾಲೆಗಳಲ್ಲಿ ಹಾಗೂ ಮಕ್ಕಳನ್ನೊಳಗೊಂಡ ಸಂಸ್ಥೆಗಳಲ್ಲಿ ರಚಿಸಿ ಸಮರ್ಪಕವಾಗಿ ಅನುಷ್ಠಾನವನ್ನು ಮಾಡುವುದರ ಮೂಲಕ ಮಕ್ಕಳಿಗೆ ಸುರಕ್ಷಿತ ವಾತಾವರಣವನ್ನು ಕಲ್ಪಿಸಬೇಕಾಗಿದೆ. ಈ ಕುರಿತಾಗಿ ಹೆಚ್ಚಿನ ಮಾಹಿತಿಗಾಗಿ ಪಡಿ ಸಂಸ್ಥೆಯನ್ನು ಸಂಪರ್ಕಿಸಬಹುದಾಗಿದೆ.

**ಕಾಲಕಾಲಕ್ಕೆ ತರಬೇತಿಗಳನ್ನು ನೀಡಿ ಯೋಜನೆಯ ಮುಖ್ಯ ತರಬೇತುದಾರರನ್ನು ಸಶಕ್ತಗೊಳಿಸಿ ಶಾಲಾ ಹಂತದ ಎಸ್‌ಡಿಎಂಸಿ ಸದಸ್ಯರನ್ನು ತರಬೇತುಗೊಳಿಸುವುದು.**



# ಶಿಕ್ಷಣ ಹಕ್ಕು ಕಾಯ್ದೆ 2009 ಇದರ ಪರಿಣಾಮಕಾರಿ ಅನುಷ್ಠಾನದ ಕುರಿತು ವಿಭಾಗೀಯ ಮಟ್ಟದ ಸಮಾಲೋಚನೆ ಸಭೆ

ಪಡಿಸಂಸ್ಥೆ ಮಂಗಳೂರು ಮತ್ತು ಸಮಾನ ಮನಸ್ಕ ಸಂಘಟನೆಗಳ ವತಿಯಿಂದ ಶಿಕ್ಷಣ ಹಕ್ಕು ಕಾಯ್ದೆ 2009 ಇದರ ಪರಿಣಾಮಕಾರಿ ಅನುಷ್ಠಾನದ ಕುರಿತು ಕರ್ನಾಟಕ ರಾಜ್ಯದ ವಿಭಾಗೀಯ ಮಟ್ಟದ ಸಮಾಲೋಚನೆ ಸಭೆಯನ್ನು ಮಾರ್ಚ್ ತಿಂಗಳಲ್ಲಿ ಆಯೋಜಿಸಲಾಗಿತ್ತು.

ಸಂಸ್ಥೆಯ ನಿರ್ದೇಶಕರಾದ ಶ್ರೀ ರೆನ್ನಿ ಡಿ'ಸೋಜಾ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಹಾಗೂ ಸಂಪರ್ಕ ಸಂಯೋಜಕರಾದ ಶ್ರೀ ಸಿದ್ಧಾಂತ್ ಪಿ. ಯವರು ಜಿಲ್ಲಾ ಮಟ್ಟದ ಸಭೆಗಳ ಉಸ್ತುವಾರಿಯನ್ನು ವಹಿಸಿದ್ದರು.

ಈ ಸಭೆಯನ್ನು ಶಿಕ್ಷಣ ಹಕ್ಕು ಕಾಯ್ದೆ ಇದರ ಪರಿಣಾಮಕಾರಿಯಾಗಿ ಜಾರಿ ಮಾಡುವ ನಿಟ್ಟಿನಲ್ಲಿ ರಾಜ್ಯಮಟ್ಟದ ಸಮಾಲೋಚನೆ ಸಭೆಯನ್ನು ನಡೆಸುವುದಕ್ಕೆ ಪೂರ್ವಭಾವಿ ಸಮಾಲೋಚನಾ ಸಭೆಯಾಗಿ ನಡೆಸಿ ಹೋಬಳಿ ತಾಲ್ಲೂಕು ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ವ್ಯವಸ್ಥೆಯ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಸ್ಥಳೀಯವಾಗಿ ತಿಳಿದುಕೊಂಡು ಇದಕ್ಕೆ ಪೂರಕವಾಗಿ ಹಲವಾರು ಬದಲಾವಣೆಗಳನ್ನು ತರಲು ಸಮಾನ ಮನಸ್ಕ ಸಂಘಟನೆಗಳನ್ನು ಒಳಗೊಂಡ ಸಮಿತಿಗಳನ್ನು ರಚನೆ ಮಾಡಿ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ಸೇರಿ ತಮ್ಮ ತಮ್ಮ ಸ್ಥಳೀಯ ಮಟ್ಟದಲ್ಲಿ ಆಗಿರುವಂತ ಹಬ್ಬದ ಬಲಾವಣೆಗಳ ಬಗ್ಗೆ ತಿಳಿದುಕೊಂಡು ಅದನ್ನು ಸಭೆಯಲ್ಲಿ ಬಂದು ತಿಳಿಸಿ ಅದಕ್ಕೆ ಬೇಕಾದಂತಹ ಸಲಹೆಗಳನ್ನು ಪಡೆದುಕೊಂಡು ಆರ್‌ಟಿಇ ಕಾಯ್ದೆ ಪರಿಣಾಮಕಾರಿ ಅನುಷ್ಠಾನವಾಗಲು ಜನಾಂದೋಲನವನ್ನು ಮಾಡಬೇಕೆಂದು ಸಭೆಗಳಲ್ಲಿ ನಿರ್ಣಯವನ್ನು ಮಾಡಲಾಯಿತು.

ಮಾರ್ಚ್ ತಿಂಗಳಲ್ಲಿ ಮಂಡ್ಯ, ರಾಯಚೂರು, ಕೊಪ್ಪಳ, ದಾವಣಗೆರೆ, ರಾಮನಗರ, ಉಡುಪಿ, ದಕ್ಷಿಣಕನ್ನಡ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿ ಸಭೆ ನಡೆಸಿದ್ದು, ಮುಂದಿನ 3 ತಿಂಗಳಲ್ಲಿ ಯಾವ ಕೆಲಸ ಆಗಬೇಕೆಂದು ಚರ್ಚೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಈ ಸಮಾಲೋಚನಾ ಸಭೆಯಲ್ಲಿ ರಾಜ್ಯದ ವಿವಿಧ 36 ನೆಟ್‌ವರ್ಕ್‌ಗಳ 263 ಸ್ವಯಂ ಸೇವಾ ಪದಾಧಿಕಾರಿಗಳು ಭಾಗಿಯಾಗಿದ್ದರು.

ಗ್ರಾಮ ಪಂಚಾಯತಿ ಮಟ್ಟದ **"ಮಕ್ಕಳ ಹಕ್ಕುಗಳ ಸಂರಕ್ಷಣಾ ಸಮಿತಿ"** ರಚನೆ ಮತ್ತು ಸದಸ್ಯರುಗಳ ವಿವರ. **Child Rights Protection Committee at the Grama Panchayath Level.**

ಈ ಸಮಿತಿಯ ಸಭೆ ಪ್ರತಿ ಮೂರು ತಿಂಗಳಿಗೊಂದರಂತೆ ವರ್ಷಕ್ಕೆ 4 ಸಭೆ ನಡೆಸಿ ವರದಿಗಳನ್ನು ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಜಿಲ್ಲಾಡಳಿತ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಕಳುಹಿಸಬೇಕು. ತನ್ಮೂಲಕ ಪ್ರತಿ ಗ್ರಾಮ ಪಂಚಾಯತಿಯನ್ನು **"ಮಕ್ಕಳಿಗೆ ಸುರಕ್ಷಿತ ಹಾಗೂ ಮಕ್ಕಳ ಸ್ನೇಹಿ ಪಂಚಾಯತಿ"**ಯನ್ನಾಗಿ ಮಾಡುವುದು.

(ಇದೇ ರೀತಿಯ ಸಮಿತಿಗಳು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತದೆ.)




ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ರಾಜ್ಯ ಪೊಲೀಸ್

## ವರ್ಷದ 4 ಸಭೆಗಳಲ್ಲಿನ ಕಾರ್ಯಸೂಚಿ

1. ಗ್ರಾಮ ಪಂಚಾಯತಿಯ ಪ್ರತೀ ಗ್ರಾಮದಲ್ಲಿ 'ಮಕ್ಕಳ ಕಾವಲು ಸಮಿತಿ' ರಚನೆ. (ಪಂಚಾಯತ್ ಮಟ್ಟದ ಸಮಿತಿಯಂತೆ)
2. ಗ್ರಾಮ ಪಂಚಾಯತಿ ಮಟ್ಟದಲ್ಲಿನ ಎಲ್ಲಾ 5 ವರ್ಷದೊಳಗಿನ ಮಕ್ಕಳಿಗೆ 100% ಜನನ ಪ್ರಮಾಣ ಪತ್ರ ಲಭಿಸುವಂತೆ ಮಾಡುವುದು.
3. ಎಲ್ಲಾ ಮಕ್ಕಳಿಗೆ 100% ಚುಚ್ಚುಮದ್ದು /ಲಸಿಕೆ.
4. 3–6 ವರ್ಷದೊಳಗಿನ ಎಲ್ಲಾ ಮಕ್ಕಳು 100% ಅಂಗನವಾಡಿಗೆ ದಾಖಲಾತಿ–ಹಾಜರಾತಿ.
5. 6–18 ವರ್ಷದೊಳಗಿನ ಮಕ್ಕಳು 100% ಶಾಲೆಗೆ ದಾಖಲಾತಿ ಮತ್ತು ಹಾಜರಾತಿ.
6. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಮಕ್ಕಳು ಶಾಲೆ ಬಿಡುವುದನ್ನು ಸಂಪೂರ್ಣ ತಡೆಯುವುದು.
7. ಬಾಲ್ಯವಿವಾಹ ತಡೆ.
8. ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ.
9. ಮಕ್ಕಳ ಅಪೌಷ್ಟಿಕತೆ ನಿವಾರಣೆ.
10. ಗುಳೆ/ವಲಸೆ ತಡೆಗೆ ಕ್ರಮ.
11. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ.
12. ವಿಶೇಷ ಸಾಮರ್ಥ್ಯವುಳ್ಳ ಮಕ್ಕಳ ರಕ್ಷಣೆ.
13. 100% ಮದುವೆ ನೊಂದಣಿಗೆ ಕ್ರಮ.
14. ಶಾಲೆಗಳಿಗೆ ಮೂಲಭೂತ ಸೌಕರ್ಯಕ್ಕೆ ಕ್ರಮ.
15. ಮಾರಕ ರೋಗಗಳ ತಡೆ.
16. ಭಿಕ್ಷಾಟನೆ/ಬೀದಿ–ಚಿಂದಿ ಆಯುವ ಮಕ್ಕಳ ರಕ್ಷಣೆ–ಶಿಕ್ಷಣ.
17. ಪ್ರತೀ ಅಂಗನವಾಡಿಯಲ್ಲಿ ಕ್ರಿಯಾತ್ಮಕ ಬಾಲಕಿ/ಕಿಶೋರಿ ಸಂಘ ರಚನೆ.
18. ಎಲ್ಲಾ ಶಾಲೆಗಳಲ್ಲಿನ ಎಸ್‌ಡಿಎಮ್‌ಸಿ ಯ ಬಲವರ್ಧನೆ ಹಾಗೂ ಶಿಕ್ಷಣದತ್ತ ಸಮುದಾಯದ ಪಾಲುದಾರಿಕೆ ಮತ್ತು ಹೊಣೆಗಾರಿಕೆಗೆ ಕ್ರಮ.
19. ಎಲ್ಲಾ ಶಾಲೆಗಳಲ್ಲಿ ಮಕ್ಕಳ ಸುರಕ್ಷತಾ ನೀತಿ ಅನುಷ್ಠಾನ, ಸುರಕ್ಷತಾ ಸಮಿತಿ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ ರಚನೆಗೆ ಸೂಕ್ತ ಕ್ರಮ ಮತ್ತು ಸಹಕಾರ.
20. ಮಕ್ಕಳ ಕಾವಲು ಸಮಿತಿಯ ಅಡಿಯಲ್ಲಿ ಉಪ ಸಮಿತಿಯಾಗಿ "ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿ"ಯ ರಚನೆ.

ಮಕ್ಕಳ ಸಹಾಯವಾಣಿ CHILD LINE 1098

**ಸೂಚನೆ 1 :** ಪ್ರತೀ ವರ್ಷ ನವೆಂಬರ್ ತಿಂಗಳಲ್ಲಿ **ಮಕ್ಕಳ ಗ್ರಾಮಸಭೆ** ಕಡ್ಡಾಯವಾಗಿ ಆಯೋಜಿಸಿ ಮಕ್ಕಳ ಭಾಗವಹಿಸುವಿಕೆಯ ಹಕ್ಕನ್ನು ಖಾತ್ರಿಪಡಿಸಿ, ಪಂಚಾಯತ್ ವ್ಯಾಪ್ತಿಯಲ್ಲಿ 18 ವರ್ಷದೊಳಗಿನ ಮಕ್ಕಳ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವುದು. (ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ – 1993 (2015 ರ ತಿದ್ದುಪಡಿಯಂತೆ 3–ಹೆಚ್ 2 (I))

**ಸೂಚನೆ 2 :** ವರ್ಷದ 4 ಸಭೆಗಳಲ್ಲಿ ಮೇಲಿನ ಸದಸ್ಯರುಗಳಲ್ಲದೆ. ಅಗತ್ಯಕ್ಕನುಗುಣವಾಗಿ ತಾಲ್ಲೂಕು / ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಸುವುದು ಹಾಗೂ ವರ್ಷದ 2 ಸಭೆಗಾದರೂ ಕಾರ್ಮಿಕ ನಿರೀಕ್ಷಕರನ್ನು, ಕೃಷಿ ಅಧಿಕಾರಿ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರನ್ನು ಕರೆಸುವುದು.

**ಸೂಚನೆ 3 :** ಎಲ್ಲಾ ಹಂತದಲ್ಲಿ ನಿಮ್ಮ ಜಿಲ್ಲೆಯ **ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ಸಹಾಯವಾಣಿ** (✆ : 1098)ಯ ಸಹಾಯ ಪಡೆಯುವುದು.

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ

ದುಡಿಮೆ ಬೇಡ
ಶಿಕ್ಷಣ ಬೇಕು

ಪ್ರಕಟಣೆ, ಅನುಷ್ಠಾನದ ಜವಾಬ್ದಾರಿ ಮತ್ತು ಸಹಭಾಗಿತ್ವ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಕಂದಾಯ, ಸಾರ್ವಜನಿಕ ಶಿಕ್ಷಣ, ಕಾರ್ಮಿಕ, ಪೊಲೀಸ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಹಾಗೂ ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಕರ್ನಾಟಕ ಸರ್ಕಾರ, ಬೆಂಗಳೂರು.




Shot on Y50
AI Quad camera
2022.03.05 11:27






PADI
Project: Quality Education in Government Primary Schools
WORKSHOP ON
RESOURCE DEVELOPMENT FOR ADVOCACY
& COMMUNITY OWNERSHIP


PADI
WORKSHOP ON
ಜನ ಸಮುದಾಯದ ವಕೀಲಿ
ಮಕ್ಕಳ ಹಕ್ಕುಗಳಿಗೆ ಧ್ವನಿಯಾಗಲಿ


PADI - MANGALURU
QUALITY EDUCATION IN GOVT. HIGHER PRIMARY SCHOOL
PROJECT 2020-2023
SUSTAINED SDMC FOR EFFECTIVE IMPLEMENTATION OF RTE ACT 2009
ASSESSMENT OF SDMC
GOVT. HIGHER PRIMARY SCHOOL


ಕೋವಿಡ್-19 ಸಂದರ್ಭದಲ್ಲಿ ಶಿಕ್ಷಣ ಹಕ್ಕು
ಕಾಯಿದೆ 2009ರ ಅನುಷ್ಠಾನದಲ್ಲಿ